# ಕರ್ನಾಟಕ ವಿಕಾಸ

KARNATAKA VIKAS

¸ÉÆÉ§gï September 2013




“d® ¸A¥v£Ä ¸AgQ¸ÆÃt
fÃª ¸APÄ®ª£Ä G½¸ÆÃt”



# ನಮ್ಮ ರಾಷ್ಟ್ರಧ್ವಜವೇರಲಿ ದಿನವೂ
# ರಾಜ್ಯದ ಪ್ರತಿಯೊಂದು
# ಪಂಚಾಯತ್ ಕಛೇರಿಗಳಲ್ಲಿ...





## ಹಾರುತಿದೆ ರಾಷ್ಟ್ರಧ್ವಜ,
## ಸಾರುತಿದೆ ಗ್ರಾಮ ಸ್ವರಾಜ್ಯ...

ರಾಷ್ಟ್ರೀಯ ಸ್ವಾಭಿಮಾನ, ವೈಭವ ಮತ್ತು ಹೆಗ್ಗಳಿಕೆಯ ಪ್ರತೀಕವಾಗಿರುವ ನಮ್ಮ ರಾಷ್ಟ್ರಧ್ವಜವನ್ನು 15ನೇ ಆಗಸ್ಟ್, 2013 ರಿಂದ ಪ್ರಾರಂಭಿಸಿ, ಪ್ರತಿದಿನ ನಿಯಮಾನುಸಾರ ರಾಜ್ಯದ ಎಲ್ಲಾ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳು ತಮ್ಮ ಕಾರ್ಯಾಲಯದ ಆವರಣದಲ್ಲಿ ಪ್ರತಿದಿನ ಘನತೆ ಮತ್ತು ಗೌರವಯುತವಾಗಿ ಅಭಿಮಾನದಿಂದ ಹಾರಿಸಲು ಅರ್ಪಿತರಾಗೋಣ.

ಕರ್ನಾಟಕ ವಿಕಾಸ

ಸೆಪ್ಟೆಂಬರ್ September 2013
ಸಂಪುಟ : 54 Volume : 54
ಸಂಚಿಕೆ : 10 Issue : 10

# ಈ ಸಂಚಿಕೆಯೊಳಗೆ

5. ಸಚಿವಾಲಯದಿಂದ ಸಂದೇಶ
7. ಮುಖಪುಟ ವರದಿ – ಡಾ॥ ಎಂ.ಎಸ್. ಮಂಜುನಾಥ
11. ಲೇಖನ
13. ಯಶೋಗಾಥೆಗಳು
27. ಚಿಂತನೆ – ಪ್ರೊ. ಎ.ಎಚ್. ಮಾಸಪತಿ
32. ಪಂಚತಂತ್ರ ವರದಿ
33. ಸಕಾಲ ವರದಿ
34. ಸುತ್ತೋಲೆಗಳು




ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಭೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿಗಳು

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ॥ ಎಂ.ಎಸ್.ಮಂಜುನಾಥ**
**ನಾಗರಾಜ್ ಬಿ ವಾಗಾ**

**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ
ವಿಳಾಸಕ್ಕೆ ತಲುಪಿಸಬಹುದು


**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com

**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು

# ನಿಮ್ಮ ನುಡಿ




ಮಾನ್ಯರೆ, ತಮ್ಮ 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಅತಿ ಸುಂದರವಾಗಿ ಮೂಡಿ ಬರುತ್ತಿದ್ದು, ಓದುಗರು ಈ ಪತ್ರಿಕೆಯ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಪತ್ರಿಕೆಯು ಪ್ರತಿ ತಿಂಗಳು ನಮ್ಮ ಸಾರ್ವಜನಿಕ ಗ್ರಂಥಾಲಯಕ್ಕೆ ತಪ್ಪದೇ ಬರುತ್ತಿರಲೆಂದು ಕೇಳಿಕೊಳ್ಳುತ್ತಾ, ನನ್ನ ವೈಯಕ್ತಿಕವಾಗಿ ಹಾಗೂ ಸಾರ್ವಜನಿಕ ಗ್ರಂಥಾಲಯದ ಓದುಗರ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಧನ್ಯವಾದಗಳೊಂದಿಗೆ

**ಮೇಲ್ವಿಚಾರಕ**
ಗ್ರಾಮ ಪಂಚಾಯತ್ ಗ್ರಂಥಾಲಯ, ಕೋಟಬಾಗಿ,
ತಾ॥ ಹುಕ್ಕೇರಿ, ಜಿ॥ ಬೆಳಗಾವಿ

ಮಾನ್ಯರೆ, ಆಗಸ್ಟ್ 2013ರ "ಕರ್ನಾಟಕ ವಿಕಾಸ" ಮಾಸ ಪತ್ರಿಕೆಯು ಗ್ರಾಮೀಣ ರಸ್ತೆಗಳು ಹಾಗೂ ಗ್ರಾಮೀಣ ಜನರ ಜೀವನಾಡಿಗಳು ಎಂಬ ಮೂಲಭೂತ ಸೌಲಭ್ಯದ ಬಗ್ಗೆ ಲೇಖನಗಳೊಂದಿಗೆ ಪ್ರಕಟವಾಗಿರುವುದು ವಿಶೇಷವಾಗಿದೆ. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಿದ್ದು ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಆಗಿರುವ ಬದಲಾವಣೆ ಹಾಗೂ ಸರ್ಕಾರದ ಯೋಜನೆಯ ಬಗ್ಗೆ ತಿಳಿಯುವಲ್ಲಿ ಸಹಕಾರಿಯಾಗಿದೆ. ಇಂತಹ ಉಪಯುಕ್ತ ಲೇಖನಗಳು ಮುಂದೆಯೂ ಸಹ ಪ್ರಕಟವಾಗಲಿ ಎಂದು ಆಶಿಸುತ್ತೇವೆ.

**ಸುಬ್ರಮಣ್ಯ ಕೆ.ವೈ**
ಬಿಂಡಿಗನವಿಲೆ ಹೋ, ನಾಗಮಂಗಲ ತಾ॥ ಮಂಡ್ಯ ಜಿಲ್ಲೆ

ಮಾನ್ಯರೆ, ಮೊದಲಿದ್ದಂತಹ ಆಪ್ತತೆ, ಆರ್ದ್ರತೆ ಇಲ್ಲವಾಗಿದೆ. ಸಂಚಿಕೆಯನ್ನೋದುವಾಗ ಕೇವಲ ವರದಿಗಾರಿಕೆ ವಿಜೃಂಭಿಸುತ್ತಿರುವ ಭಾಸವಾಗಿ ಖಾಲಿತನ ತಟ್ಟುತ್ತದೆ. ಬದುಕಿನ ಜೀವಂತಿಕೆ ಮೇಳೈಸುತ್ತಿದ್ದ ಹಲವು ಕಾಲಂಗಳು ಕಾಣೆಯಾಗಿರುವುದು ಕಳೆದುಕೊಂಡ ಭಾವದ ಚಡಪಡಿಕೆಯನ್ನು ಉಂಟುಮಾಡುತ್ತದೆ. ಸಾಧ್ಯವಾದರೆ ಮರಳಿ ಜೀವ ನೀಡಿದರೆ ಒಳಿತು.

**ಉಮೇಶ್ ಹುಲಿಕುಂಟೆ**
ಕಲಾಭಾರತಿ ನಿಲಯ, 4ನೇ ಕ್ರಾಸ್
ಎಂ.ಜಿ ರಸ್ತೆ, ತುಮಕೂರು

ಮಾನ್ಯರೆ, ಆಗಸ್ಟ್ 2013ರ ಕರ್ನಾಟಕ ವಿಕಾಸ, ನಿಗದಿತ ಸಮಯಕ್ಕೆ ಬಂದು ಗ್ರಾಮ ಪಂಚಾಯತಿಗಳಿಗೆ ಬಂದು ತಲುಪುತ್ತಿದೆ. ಓದುಗರ & ಸಾರ್ವಜನಿಕರು ಇದರ ಬಗ್ಗೆ ಸಂತಸ ವ್ಯಕ್ತಪಡಿಸುತ್ತಿದ್ದಾರೆ. ಹೆಚ್.ಜಿ.ಶಿವಾನಂದಮೂರ್ತಿರವರ ಇಂಧನ ಮಂತ್ರಾಲಯದ ಯೋಜನೆ & ಉಳಿತಾಯದ ಸೂತ್ರಗಳು ಮತ್ತು ಮಕ್ಕಳಿಗೆ ಬಿಸಿಯೂಟದ ಜೊತೆಗೆ ಹಾಲು, ತುಪ್ಪ, ಮಜ್ಜಿಗೆ, ಪೌಷ್ಠಿಕತೆಗೆ ಅತ್ಯಂತ ಅಗತ್ಯ ಎಂಬುದರ ಬಗ್ಗೆ ಶ್ರೀ ತುಕಾರಾಂ ತಿಳಿಸಿಕೊಟ್ಟಿದ್ದಾರೆ. ಇಷ್ಟೆಲ್ಲಾ ಮಾಹಿತಿ ನೀಡಿದ ಕರ್ನಾಟಕ ವಿಕಾಸ ಮತ್ತು ಸಿಬ್ಬಂದಿಗೆ ಧನ್ಯವಾದಗಳು.

**ಎ.ಎಂ.ಅಪ್ಪಾಜಿ,**
ಮೇಲ್ವಿಚಾರಕರು,
ಅಣ್ಣೂರು ಗ್ರಾಮ ಪಂಚಾಯತಿ ಗ್ರಂಥಾಲಯ,
ಮದ್ದೂರು ತಾ:, ಮಂಡ್ಯ ಜಿಲ್ಲೆ–571422.

## ಸಚಿವಾಲಯದಿಂದ
# ಸಂದೇಶ



**ಟಿ.ಎಂ. ವಿಜಯಭಾಸ್ಕರ್**
ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರಿಯ ಬಂಧುಗಳೇ,

### "ಸುವರ್ಣ ಗ್ರಾಮೋದಯ ಯೋಜನೆ" ಸದುಪಯೋಗವಾಗಲಿ...

ಕರ್ನಾಟಕ ಏಕೀಕರಣಗೊಂಡು ನವೆಂಬರ್ 01, 2006 ಕ್ಕೆ 50 ವರ್ಷಗಳು ತುಂಬಿದ ಸುಸಂದರ್ಭದಲ್ಲಿ ಸರ್ಕಾರವು 'ಸುವರ್ಣ ಕರ್ನಾಟಕ ವರ್ಷಾಚರಣೆ' ಆಚರಿಸಿದ ಸಂದರ್ಭದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಹಮ್ಮಿಕೊಂಡು ಇದುವರೆಗೆ ಐದು ಹಂತಗಳಲ್ಲಿ ಒಟ್ಟಾರೆ 5,555 ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಗ್ರಾಮದೊಳಗಿನ ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸಿ, ಗ್ರಾಮೀಣ ಪರಿಸರವನ್ನು ಉತ್ತಮಪಡಿಸುವ ಧ್ಯೇಯೋದ್ದೇಶಗಳೊಂದಿಗೆ ಹಂತಹಂತವಾಗಿ ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸುವ ಸುವರ್ಣ ಗ್ರಾಮೋದಯ ಯೋಜನೆಯು ರಾಜ್ಯಾದಂತ ಅನುಷ್ಠಾನಗೊಳ್ಳುತ್ತಿರುವುದು ನಿಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ.

### ಅಗತ್ಯವಿಲ್ಲದ ಕಾಮಗಾರಿಗಳ ಬದಲಾವಣೆಯು ವಿವೇಚನೆಯಿಂದಿರಲಿ...

ಸುವರ್ಣ ಗ್ರಾಮೋದಯ ಯೋಜನೆಯ ಮಾರ್ಗಸೂಚಿಗಳನ್ವಯ ಕಾಮಗಾರಿಗಳನ್ನು ಶೇಕಡಾವಾರು/ ಅನುಪಾತಗಳನ್ವಯ ಅನುಷ್ಠಾನಗೊಳಿಸ ಬೇಕಿರುತ್ತದೆ. ಹೀಗಿದ್ದರೂ ಕೆಲವೊಮ್ಮೆ ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಅಗತ್ಯವಿಲ್ಲದ ಕಾಮಗಾರಿಗಳ ಅನುದಾನವನ್ನು ಯೋಜನೆಯಲ್ಲಿ ನಿಗದಿಪಡಿಸಿರುವ ಇತರೆ ಕಾಮಗಾರಿಗಳಿಗೆ ವಿಕೇಂದ್ರೀಕೃತ ನೀತಿಯನ್ವಯ ಸ್ಥಳೀಯವಾಗಿ ನಿಯಮಗಳನ್ವಯ ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದರೆ ಈ ಬದಲಾವಣೆಗೆ ಮುನ್ನ ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಅಗತ್ಯತೆ ಹಾಗೂ

ಅವಶ್ಯಕತೆಯನ್ನು ಆಧರಿಸಿ ಗ್ರಾಮದ ಅಭಿವೃದ್ಧಿ ಹಿತದೃಷ್ಟಿಯಿಂದ ಬದಲಾವಣೆಯನ್ನು ತಮ್ಮ ಹಂತದಲ್ಲಿಯೇ ಕೈಗೊಳ್ಳಬಹುದಾಗಿರುತ್ತದೆ.

ಕಟ್ಟಡಗಳನ್ನು ನಿರ್ಮಿಸಲು ಪ್ರಥಮ ಆದ್ಯತೆಯಲ್ಲಿ ನಿವೇಶನಗಳನ್ನು ಒದಗಿಸಿ ಕಟ್ಟಡಗಳನ್ನು ಪೂರ್ಣಗೊಳಿಸಬೇಕು. ಇದಕ್ಕೆ ಅನುದಾನ ಕೊರತೆ ಇದ್ದ ಪಕ್ಷದಲ್ಲಿ ಇದೇ ಯೋಜನೆಯ ಬೇರೊಂದು ಕಾರ್ಯಕ್ರಮದ ಅಥವಾ ಇತರೆ ಕಾರ್ಯಕ್ರಮಗಳ ಅನುಷ್ಠಾನದ ನಂತರ ಉಳಿತಾಯವಾಗಬಹುದಾದ ಅನುದಾನವನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಯೋಜನೆಯಡಿ ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಕಟ್ಟಡಗಳನ್ನು ಕಡಿಮೆ ಅನುದಾನದಲ್ಲಿ ನಿರ್ಮಿಸುವ ಬದಲಾಗಿ ಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನವನ್ನು ಬಳಸಿಕೊಂಡು ಒಂದೇ ಸುಸ್ಥಿರ ಕಟ್ಟಡವನ್ನು ನಿರ್ಮಿಸಿ ಯೋಜನೆಯನ್ನು ಯಶಸ್ವಿಗೊಳಿಸಬೇಕು.

ಕೆಲವೊಮ್ಮೆ ಯೋಜನೆಯಡಿ ಅಂಗನವಾಡಿ ಮತ್ತು ಸಮುದಾಯ ಕಟ್ಟಡಗಳನ್ನು ನಿರ್ಮಿಸಲು ತಾಂತ್ರಿಕ ಕಾರಣಗಳಿಗಾಗಿ ನಿವೇಶನಗಳನ್ನು ಸಕಾಲದಲ್ಲಿ ನೀಡದಿರುವ ಹಿನ್ನೆಲೆಯಲ್ಲಿ ಕಾಮಗಾರಿಗಳು ವಿಳಂಬವಾಗಿ ಅಂದಾಜು ವೆಚ್ಚಗಳು ಏರುಪೇರಾಗುವ ನಿದರ್ಶನಗಳನ್ನು ಗಮನಿಸಲಾಗಿದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಕಟ್ಟಡ ಕಾಮಗಾರಿಗಾಗಿ ಅಗತ್ಯ ನಿವೇಶನಗಳನ್ನು ಸಕಾಲದಲ್ಲಿ ದೊರಕಿಸಿ ಕೊಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸಬೇಕು.

ಒಂದೊಮ್ಮೆ ನಿವೇಶನಗಳು ಲಭ್ಯವಿಲ್ಲದ ಪಕ್ಷದಲ್ಲಿ ಯೋಜನೆ ಅನುಷ್ಠಾನಗೊಂಡ ಗ್ರಾಮಗಳಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಕ್ಷಣವೇ ಈ ಸಂಬಂಧ ಗ್ರಾಮಸ್ಥರ ಸಭೆ ನಡೆಸಿ ಕಟ್ಟಡಕ್ಕೆ ನಿವೇಶನಗಳು ಲಭ್ಯವಿಲ್ಲದಿರುವುದನ್ನು ಖಚಿತಪಡಿಸಿಕೊಂಡ ನಂತರವಷ್ಟೆ ನಿವೇಶನ ಅಲಭ್ಯತೆಯ ದೃಢೀಕರಣ ನೀಡಬೇಕು. ಅಂಗನವಾಡಿ ಕಟ್ಟಡಗಳನ್ನು ಬದಲಾಯಿಸುವಾಗ ಸಂಬಂಧಪಟ್ಟ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಕಟ್ಟಡ ಅವಶ್ಯಕತೆ ಇಲ್ಲದಿರುವುದರ ಬಗ್ಗೆ ದೃಢೀಕರಣ ಪತ್ರ ಪಡೆಯಬೇಕು.

ಒಟ್ಟಾರೆ ಯೋಜನೆಯ ಅನುದಾನದ ಬಳಕೆ ಹಾಗೂ ಕಾಮಗಾರಿಗಳ ಬದಲಾವಣೆಯಲ್ಲಿ ವಿವೇಚನೆಯ ನಿರ್ಧಾರಗಳನ್ನು ಕೈಗೊಂಡು ಯೋಜನೆಯನ್ನು ಪಾರದರ್ಶಕ ಹಾಗೂ ಕ್ರಿಯಾಶೀಲವಾಗಿ ಅನುಷ್ಠಾನಕ್ಕೆ ತರಲು ಕೋರುತ್ತೇನೆ.

(n.JA. «dAiÀ¨ s¸Ágï)

# ಗ್ರಾಮೀಣ ಕೆರೆಗಳ ಪುನಶ್ಚೇತನ ಕಾರ್ಯಗಾರ

– ಡಾ: ಎಂ. ಎಸ್. ಮಂಜುನಾಥ

'ರಾಜ್ಯದಲ್ಲಿ ಸುಮಾರು 37,000 ಕೆರೆಗಳಿದ್ದು, ಪ್ರಸಕ್ತ ನೀರಿಲ್ಲದೆ ಬತ್ತಿ ಹೋಗಿರುವ ಸುಮಾರು 12,000 ಕೆರೆಗಳನ್ನು ಪ್ರಥಮ ಹಂತದಲ್ಲಿ ತಕ್ಷಣವೇ ಪುನರುಜ್ಜೀವನ ಮಾಡುವ ಕಾರ್ಯವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಳ್ಳಬೇಕು. ರಾಜ್ಯದಲ್ಲಿನ ಎಲ್ಲಾ ಕೆರೆಗಳ ವಿಸ್ತೀರ್ಣದ ಬಗ್ಗೆ ಸಮೀಕ್ಷೆ ನಡೆಸಿ ಒತ್ತುವರಿಯಾಗಿದ್ದ ಪಕ್ಷದಲ್ಲಿ ನಿರ್ಧಾಕ್ಷಿಣ್ಯವಾಗಿ ತೆರವುಗೊಳಿಸಿ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮವನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ತಂದು ಕೆರೆ ಸಂರಕ್ಷಣೆಗೆ ತಕ್ಷಣವೇ ಕ್ರಮ ಕೈಗೊಳ್ಳಬೇಕು'

"ಜಲ ಸಂಪತ್ತನ್ನು ಸಂರಕ್ಷಿಸೋಣ– ಜೀವ ಸಂಕುಲವನ್ನು ಉಳಿಸೋಣ" ಎಂಬ ಧ್ಯೇಯ ವಾಕ್ಯದೊಂದಿಗೆ ಗ್ರಾಮೀಣ ಕೆರೆಗಳ ಪುನಶ್ಚೇತನ ಕಾರ್ಯಗಾರವನ್ನು ಇತ್ತೀಚೆಗಷ್ಟೆ ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು



ಎಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ದಿನಾಂಕ: 07. 08.2013 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ವಿಕಾಸಸೌಧದಲ್ಲಿ ನಡೆದ 'ಗ್ರಾಮೀಣ ಕೆರೆಗಳ ಪುನಃಶ್ಚೇತನ ಕಾರ್ಯಗಾರ' ವನ್ನು ಉದ್ಘಾಟಿಸಿ ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ರವರು ಮಾತನಾಡುತ್ತಾ

ಸಹಾಯಕ ಸಂಪಾದಕ,
ಕರ್ನಾಟಕ ವಿಕಾಸ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ




**ನೀರಾವರಿ ತಜ್ಞರಾದ ಡಾ|| ರಾಜೇಂದ್ರ ಸಿಂಗ್‌ರವರು ಮಾತನಾಡುತ್ತಿರುವುದು**

ಕುಡಿಯುವ ನೀರಿಗಾಗಿ ಜನರು ಪರಿತಪಿಸುವ ಹಿನ್ನೆಲೆಯನ್ನು ವಿವರಿಸಿ ಜಲ ಸಂರಕ್ಷಣೆಯ ಬಗ್ಗೆ ಹೆಚ್ಚಿನ ಒತ್ತನ್ನು ನೀಡಬೇಕೆಂದು ಕರೆ ನೀಡಿದರು. ಉತ್ತರ ಕರ್ನಾಟಕದ ಬಹುಪಾಲು ಹಳ್ಳಿಗಳಲ್ಲಿ ಪ್ಲೋರೈಡ್ ಮತ್ತು ಆರ್ಸೆನಿಕ್ ಅಂಶವಿರುವ ನೀರಿನಿಂದಾಗಿ ಗ್ರಾಮೀಣ ಪ್ರದೇಶದ ಜನರ ಆರೋಗ್ಯಕ್ಕೆ ಮಾರಕವಾಗಿರುವ ವಿಷಯವನ್ನು ಕಾರ್ಯಗಾರದಲ್ಲಿ ಎಳೆಎಳೆಯಾಗಿ ಬಿಡಿಸಿಟ್ಟರು. ಶುದ್ದ ಕುಡಿಯುವ ನೀರು ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಪ್ರಮುಖವಾಗಿದ್ದು ಜಲ ಸಂರಕ್ಷಣೆಯ ಬಗ್ಗೆ ನಾವು ಸದಾ ಜಾಗೃತರಾಗಿರಬೇಕೆಂದು ಕರೆ ನೀಡಿದರು. ಈ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ರಾಜ್ಯದ ಎಲ್ಲಾ 37,000 ಕೆರೆಗಳನ್ನು ಹಂತಹಂತವಾಗಿ ಪುನಶ್ಚೇತನ, ಕಾಲುವೆಗಳ ದುರಸ್ಥಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು. ಇದಕ್ಕೆ ಪೂರಕವಾಗಿ ಜಲಸಂರಕ್ಷಣೆಯಲ್ಲಿ ಪರಿಣಿತರಾದ ವಿಜ್ಞಾನಿಗಳು, ತಜ್ಞರು, ಪರಿಸರವಾದಿಗಳು, ರೈತರು ಮತ್ತು ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಈ ಕಾರ್ಯಗಾರದಲ್ಲಿ ಚರ್ಚಿತವಾಗುವ ವಿಷಯಗಳು ಬಹುಮುಖ್ಯವಾಗಿರುತ್ತದೆ ಎಂದು ಸದರಿ ಕಾರ್ಯಗಾರದ ಪ್ರಾಮುಖ್ಯತೆಯನ್ನು ಪ್ರತಿಪಾದಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಣ್ಣ ನೀರಾವರಿ ಸಚಿವರಾದ ಮಾನ್ಯ ಶ್ರೀ ಶಿವರಾಜ ಎಸ್.ತಂಗಡಗಿ ಮತ್ತು ನಗರಾಭಿವೃದ್ಧಿ ಸಚಿವರಾದ ಮಾನ್ಯ ಶ್ರೀ ವಿನಯ್‌ಕುಮಾರ ಸೊರಕೆ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. ಸಣ್ಣ ನೀರಾವರಿ ಸಚಿವರು ಮಾತನಾಡಿ ಮಳೆ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿದ್ದರೂ ರಾಜಕಾಲುವೆಗಳ

ಒತ್ತುವರಿಯಿಂದ ಕೆರೆಗಳಿಗೆ ನೀರು ಹರಿಯುತ್ತಿಲ್ಲ. ಮೊದಲು ರಾಜಕಾಲುವೆಗಳ ಒತ್ತುವರಿ ತೆರವು ಮಾಡಬೇಕಾಗಿದೆ. ಹಿಂದಿನ ದಿನಗಳಲ್ಲಿ ಗ್ರಾಮೀಣ ಜನರೇ ತಮ್ಮ ಊರಿನ ಕೆರೆಗಳಲ್ಲಿ ಕಾಲಕಾಲಕ್ಕೆ ಹೂಳನ್ನು ತೆಗೆದು ನೀರು ನಿಲ್ಲುವಂತೆ ಮಾಡಿ ಅಂತರ್ಜಲ ಮಟ್ಟವನ್ನು ರಕ್ಷಿಸುತ್ತಿದ್ದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಕೆಲಸ ಮಾಡಲು ಸರ್ಕಾರದ ಅನುದಾನವನ್ನು ನಿರೀಕ್ಷಿಸುವಂತಾಗಿದೆ. ಮಾಡುವುದರಿಂದ ಕೆರೆಗಳ ಅಭಿವೃದ್ಧಿ, ಪುನಶ್ಚೇತನ ಕಾರ್ಯ ಮಾಡಿದಂತಾಗುತ್ತದೆ. ಮಳೆ ನೀರನ್ನು ಹಿಡಿದಿಟ್ಟುಕೊಂಡು ಅಂತರ್ಜಲ ಅಭಿವೃದ್ಧಿಗೆ ಪಿಕಪ್ ಡ್ಯಾಂಗಳನ್ನು ಹೆಚ್ಚಿಸುವ ಹೊಸ ಕೆರೆಗಳ ನಿರ್ಮಾಣ, ಬಾಂದಾರಗಳನ್ನು ನಿರ್ಮಿಸುವ ಚಿಂತನೆ ನಡೆದಿದೆ ಎಂದು ತಿಳಿಸಿದರು.

ಮಾನ್ಯ ನಗರಾಭಿವೃದ್ಧಿ ಸಚಿವರು



ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ತಜ್ಞರು, ಗಣ್ಯರು ಹಾಗೂ ಅಧಿಕಾರಿಗಳು

ಸರ್ಕಾರದಿಂದ ಅನುದಾನ ಬಿಡುಗಡೆಯಾದರೂ ಸಹ ಉದ್ದೇಶಿತ ಯೋಜನೆಯು ಅಭಿವೃದ್ಧಿಯಾಗುತ್ತಿಲ್ಲ. ಅಧಿಕಾರಿಗಳು ಹಾಗೂ ಗ್ರಾಮೀಣ ಜನರನ್ನು ಪಾಲ್ಗೊಳ್ಳುವಂತೆ ಮಾತನಾಡುತ್ತಾ ನಗರದ ಅಭಿವೃದ್ಧಿ ಎಂದರೆ ಕಟ್ಟಡಗಳನ್ನು ಕಟ್ಟುವುದು, ಬಿಲ್ಡರ್‌ಗಳಿಗೆ ಅವಕಾಶ ಮಾಡಿಕೊಡುವುದಾಗಿ ಎಂಬುದಾಗಿದೆ ಆದರೆ, ನೀರಿನ ಬಗ್ಗೆ ಗಮನ ಕೊಡಲಾಗುತ್ತಿಲ್ಲ. ದಕ್ಷಿಣ

ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರತಿ ವರ್ಷ ಮಳೆಗಾಲದಲ್ಲಿ 2400 ಟಿಎಂಸಿ ಯಷ್ಟು ನೀರು ಸಮುದ್ರಕ್ಕೆ ಸೇರುತ್ತದೆ. ಸಮುದ್ರಕ್ಕೆ ಹರಿದುಹೋಗುವ ನೀರನ್ನು ತಡೆಗಟ್ಟಿ ಸದ್ಬಳಕೆ ಮಾಡಬೇಕು. ಇದಕ್ಕಾಗಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದು ಕಾರ್ಯಗಾರದಲ್ಲಿ ತಿಳಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತರು ಹಾಗೂ ಖ್ಯಾತ ನೀರಾವರಿ ತಜ್ಞರಾದ ಡಾ: ರಾಜೇಂದ್ರಸಿಂಗ್ ರವರು ಭಾಗವಹಿಸಿ ಸಹ ಜಲ ಸಂರಕ್ಷಣೆಯ ಬಗ್ಗೆ ಕಾರ್ಯಗಾರದಲ್ಲಿ ಮಾತನಾಡುತ್ತಾ 'ಕರ್ನಾಟಕ ರಾಜ್ಯವು ಜಲಸಂಪತ್ತನ್ನು ಹೊಂದಿದ ರಾಜ್ಯವಾಗಿದ್ದು, ಇಲ್ಲಿ ಸಾಕಷ್ಟು ಕೆರೆಗಳು ಅಸ್ತಿತ್ವದಲ್ಲಿದ್ದು, ಈ ಕೆರೆಗಳು ಬತ್ತಿಹೋಗಿದ್ದು, ಇವುಗಳನ್ನು ಪುನಶ್ಚೇತನ ಗೊಳಿಸಿದಲ್ಲಿ ರಾಜ್ಯದಲ್ಲಿನ ನೀರಿನ ಕೊರತೆಯನ್ನು ನೀಗಿಸಿದಂತಾಗುತ್ತದೆ' ಎಂದು ತಿಳಿಸಿದರು. ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಿಗಳು ಒಂದೊಂದು ಕೆರೆಯನ್ನು ಪುನಃಶ್ಚೇತನಗೊಳಿಸಿದರೂ ಒಟ್ಟಾರೆ ರಾಜ್ಯದ 6,000 ಕೆರೆಗಳನ್ನು ಪುನಃಶ್ಚೇತನಗೊಳಿಸಬಹುದಾಗಿರುತ್ತದೆ. ಈ ಬಗ್ಗೆ ಸ್ಥಳೀಯ ಜನರಲ್ಲಿ ಹಾಗೂ ಸ್ಥಳೀಯ ಪಂಚಾಯತ್‌ನ ಸಕಲ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಮನವರಿಕೆಯಾದಲ್ಲಿ ಮಾತ್ರ ಸಾಧ್ಯ ಎಂದು ತಿಳಿಸುತ್ತಾ, ಈ ಬಗ್ಗೆ ಶಾಲಾ ಮಕ್ಕಳಿಗೂ ಸಹ ಜಾಥಾ ಮೂಲಕ ಕೆರೆಗಳ ಪುನಃಶ್ಚೇತನಕ್ಕೆ ಜಾಗೃತಿಯನ್ನು ಮೂಡಿಸಿದಲ್ಲಿ ಇಂದಿನ ಮಕ್ಕಳು ಸಹ ಜಲ ಸಂರಕ್ಷಣೆಯ ಬಗ್ಗೆ ಅರಿವು ಪಡೆಯುವಲ್ಲಿ ಸಹಾಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಗಾರದಲ್ಲಿ ಖ್ಯಾತ ಪರಿಸರ ತಜ್ಞರಾದ ಡಾ: ಯಲ್ಲಪ್ಪ ರೆಡ್ಡಿ ಯವರು ತಮ್ಮ ಆಶಯ ನುಡಿಯಲ್ಲಿ ಮಾತನಾಡುತ್ತಾ ರಾಜ್ಯದ ನೈಸರ್ಗಿಕ ಸಂಪತ್ತು, ನೀರಿನ ಮೂಲಗಳು ಮತ್ತು ಉದ್ಯಾನವನಗಳ ಮಹತ್ವವನ್ನು ವಿವರಿಸುತ್ತಾ ಕಲ್ಯಾಣಿ, ಗೋಕಟ್ಟೆ ಮತ್ತು ಹಿಂದಿನ ತಲೆಮಾರಿನವರು ಅನುಸರಿಸುತ್ತಿದ್ದ ಹಲವು ಜಲಸಂರಕ್ಷಣ ಕಾರ್ಯಗಳ ಬಗ್ಗೆ ವಿವರಣೆಗಳನ್ನು ನೀಡಿದರು.

ದಿನವಿಡಿ ನಡೆದ ಕಾರ್ಯಗಾರದಲ್ಲಿ ಅನೇಕ ತಜ್ಞರು, ಪರಿಸರವಾದಿಗಳು, ಸ್ವಸಹಾಯ ಸಂಘದ ಪ್ರತಿನಿಧಿಗಳು ವಿವಿದ ಇಲಾಖೆಗಳ ಅಧಿಕಾರಿಗಳು ಅದರಲ್ಲೂ ಪ್ರಮುಖವಾಗಿ ಪಂಚಾಯತ್ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾರ್ಯಗಾರದಲ್ಲಿ ಚರ್ಚಿಸಲಾದ ವಿಷಯಗಳನ್ನು ಸಾರಾಂಶಗೊಳಿಸುತ್ತಾ ಕೆರೆಗಳ ಪುನಃಶ್ಚೇತನ ಕಾರ್ಯವನ್ನು ಅಕ್ಟೋಬರ್ 2–2013ರ ಗಾಂಧಿ ಜಯಂತಿಯಂದು ಪ್ರಾರಂಭಿಸಬೇಕು ಎಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಕರೆ ನೀಡಿದರು.

ಕಾರ್ಯಗಾರದ ಅಂತಿಮದಲ್ಲಿ ಡಾ: ನಾಗಾಂಬಿಕ ದೇವಿ, ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇವರು ವಂದನಾರ್ಪಣೆ ಮಾಡಿದರು.

# ಸುವರ್ಣ ಗ್ರಾಮೋದಯ ಯೋಜನೆ

ಸುವರ್ಣ ಗ್ರಾಮೋದಯ ಯೋಜನೆಯು ಇದುವರೆಗೆ ೫ಹಂತಗಳಲ್ಲಿ ಅನುಷ್ಠಾನಗೊಂಡಿದ್ದು ಈ ಬಗ್ಗೆ ಕಿರುಚಿತ್ರಣ

ಕರ್ನಾಟಕ ರಾಜ್ಯ ಏಕೀಕರಣಗೊಂಡು "ಸುವರ್ಣ ಮಹೋತ್ಸವ" ಆಚರಿಸಿಕೊಂಡ ಸುಸಂದರ್ಭದಲ್ಲಿ ರಾಜ್ಯ ಸರ್ಕಾರವು 1000 ಗ್ರಾಮಗಳನ್ನು ಸಧೃಡವಾಗಿ ಅಭಿವೃದ್ಧಿಪಡಿಸಿ ಮತ್ತು ಬುಡಮಟ್ಟದ ಗ್ರಾಮ ಸಮುದಾಯವನ್ನು ಗಟ್ಟಿಗೊಳಿಸುವ ಆಶಯದೊಂದಿಗೆ ರಾಜ್ಯ ವಲಯ ಯೋಜನೆಯ ಅನುದಾನದಲ್ಲಿ "ಸುವರ್ಣ ಗ್ರಾಮೋದಯ" ಎಂಬ ಮಹಾತ್ವಾಕಾಂಕ್ಷಿ ಯೋಜನೆಯನ್ನು ದಿನಾಂಕ 07.10.2006ರಿಂದ ಜಾರಿಗೆ ತರಲಾಗಿದೆ.

ರೂ.1000 ಕೋಟಿ ಅನುದಾನದಲ್ಲಿ ರಾಜ್ಯದ್ಯಂತ 3 ಹಂತದ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಪ್ರತಿ ಗ್ರಾಮಕ್ಕೆ 2001ರ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ತಲಾನುದಾನ ರೂ.2500/-ಗಳಂತೆ ಪ್ರತಿ ಗ್ರಾಮಕ್ಕೆ ಅನುದಾನವನ್ನು ನಿಗದಿಪಡಿಸಲಾಗಿದೆ.

2006-07 ಮತ್ತು 2007-08ನೇ ಸಾಲಿನಿಂದ ಮೊದಲನೇ ಹಂತದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 1204 ಗ್ರಾಮಗಳಲ್ಲಿ ಯೋಜನೆ ಮುಕ್ತಾಯಗೊಂಡಿದೆ.

2008-09ನೇ ಸಾಲಿನಿಂದ ಎರಡನೇ ಹಂತದ ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಲ್ಲಿ ರೂ.208.20 ಕೋಟಿಗಳ ವೆಚ್ಚದಲ್ಲಿ 222 ಗ್ರಾಮಗಳ ಅನುಷ್ಠಾನ ಈ ವರ್ಷದ ಅಂತ್ಯಕ್ಕೆ ಬಹುತೇಕ ಮುಕ್ತಾಯಗೊಳ್ಳಲಿದೆ.

2009-10ನೇ ಸಾಲಿನಿಂದ ಮೂರನೇ ಹಂತದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಂದಾಜು ರೂ.1012.05 ಕೋಟಿಗಳ ವೆಚ್ಚದಲ್ಲಿ 1574 ಗ್ರಾಮಗಳಲ್ಲಿ ಯೋಜನೆಯನ್ನು ಆರಂಭಿಸಿದ್ದು ಈ ಸಾಲಿನಲ್ಲಿ ಬಹುತೇಕ ಮುಕ್ತಾಯಗೊಳ್ಳಲಿದೆ.

2010-11ನೇ ಸಾಲಿನಿಂದ ನಾಲ್ಕನೇ ಹಂತದಲ್ಲಿ ಅಂದಾಜು ರೂ.214.09 ಕೋಟಿಗಳ ವೆಚ್ಚದಲ್ಲಿ 381 ಗ್ರಾಮಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.



2012-13ನೇ ಸಾಲಿನಿಂದ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ 2174 ಗ್ರಾಮಗಳನ್ನು ಆಯ್ಕೆ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳು ಕೆಳಕಂಡಂತಿದೆ.

ನಿರ್ದೇಶಕರು,
ಸುವರ್ಣ ಗ್ರಾಮೋದಯ ಯೋಜನೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

| ಹಂತವಾರು ಆರ್ಥಿಕ ಪ್ರಗತಿಯ ವಿವರಗಳು: (ರೂ. ಕೋಟಿಗಳಲ್ಲಿ) | | | | |
|---|---|---|---|---|
| ಹಂತ | ಆಯ್ಕೆಯಾದ ಗ್ರಾಮಗಳ ಸಂಖ್ಯೆ | ನಿಗದಿಪಡಿಸಿದ ಅನುದಾನ (Outlay) | ಬಿಡುಗಡೆ | ವೆಚ್ಚ |
| I | 1204 | 1000.60 | 950.05 | 910.88 |
| II | 222 | 208.20 | 190.50 | 158.18 |
| III | 1574 | 1012.05 | 960.42 | 875.26 |
| IV | 381 | 214.09 | 192.00 | 120.35 |
| V | 2174 | 1000.00 | 170.29 | 122.40 |
| **ಒಟ್ಟು** | **5555** | **3434.94** | **2463.26** | **2187.07** |

ಸುವರ್ಣ ಗ್ರಾಮೋದಯ ಯೋಜನೆಗೆ ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಯನ್ನು ಹಾಗೂ ನಿಗದಿಪಡಿಸಿದ ತಲಾನುದಾನದನ್ವಯ ಗ್ರಾಮಗಳ ಆಯ್ಕೆಯನ್ನು ಸಂಬಂಧಪಟ್ಟ ಶಾಸಕರುಗಳು ಆಯ್ಕೆ ಮಾಡಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಶಿಫಾರಸ್ಸು ಮಾಡಿದ ಆಯ್ಕೆ ಪಟ್ಟಿಯನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಕೆಯಾದ ನಂತರ ಅವುಗಳನ್ನು ಪರಿಶೀಲಿಸಿ ಸರ್ಕಾರದಿಂದ ಅನುಮೋದನೆ ನೀಡಲಾಗುತ್ತಿದೆ. ಅದರಂತೆ ತಾಲ್ಲೂಕಿಗೆ ನಿಗದಿಪಡಿಸಿದ ಅನುದಾನವನ್ನು ಯೋಜನೆಯ ಅನುಷ್ಠಾನಾಧಿಕಾರಿಗಳಾದ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಸುವರ್ಣ ಗ್ರಾಮೋದಯ ಯೋಜನೆಯ ಅನುಷ್ಠಾನವನ್ನು ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ವಹಿಸಲಾಗಿದೆ.

1ನೇ ಹಂತದಿಂದ 4ನೇ ಹಂತದವರೆವಿಗೂ ಆಯ್ಕೆಯಾದ ಗ್ರಾಮಗಳ ಅಭಿವೃದ್ಧಿ ಯೋಜನೆಯನ್ನು ಸ್ಥಳೀಯ ಜನರ ಹಾಗೂ ಸ್ಥಳೀಯ ಪಂಚಾಯತಿಗಳ ಆಶೋತ್ತರದಂತೆ ಸರ್ಕಾರೇತರ ಸಂಸ್ಥೆಗಳು ತಯಾರಿಸಲಾಗುತ್ತಿದೆ.

**ಈ ಯೋಜನೆಯ ಸಿವಿಲ್ ಕಾಮಗಾರಿಗಳನ್ನು**

ಅ) ಪಾರದರ್ಶಕ ನಿಯಮಗಳನ್ವಯ ಟೆಂಡರ್‌ಗಳನ್ನು ಕರೆದು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗವು ನಿರ್ವಹಿಸುತ್ತಿದೆ.

ಆ) ಪಾರದರ್ಶಕ ನಿಯಮದ 4(ಜಿ)ವಿನಾಯಿತಿ ಪಡೆದಿರುವ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (KRIDL) ಇವರೂ ಸಹ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಅಲ್ಲದೇ, ಕೆಲವೊಂದು ಜಿಲ್ಲಾ ಪಂಚಾಯತ್‌ಗಳು ಪಾರದರ್ಶಕ ನಿಯಮದ 4(ಜಿ)ವಿನಾಯಿತಿ ಪಡೆದು ಜಿಲ್ಲಾ ನಿರ್ಮಿತಿ ಕೇಂದ್ರಗಳಿಂದಲೂ ಸಹ ಯೋಜನೆಯ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನ ಮಾಡುತ್ತಿರುತ್ತಾರೆ.

**ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ತರಬೇತಿ, ಸೋಲಾರ್ ವಿದ್ಯುತ್ ದೀಪ ಹಾಗೂ ಗ್ರಾಮದ ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಕಾರ್ಯಕ್ರಮವನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳು ಅನುಷ್ಠಾನ ಮಾಡುತ್ತಿವೆ.**

ಇದರಂತೆ, ಈಗಾಗಲೇ ಮುಕ್ತಾಯಗೊಂಡಿರುವ ಮೊದಲ ಹಂತದ ಯೋಜನೆಯು ಒಳಗೊಂಡಂತೆ ವಿವಿಧ ಪ್ರಗತಿಯ ಹಂತದಲ್ಲಿರುವ 2, 3, 4 ಹಾಗೂ 2012–13ನೇ ಸಾಲಿನಿಂದ ಆರಂಭವಾಗಿರುವ 5ನೇ ಹಂತದಲ್ಲಿ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳನ್ನು ಕಾಲ ಕಾಲಕ್ಕೆ ಹೊರಡಿಸಲಾಗಿರುತ್ತದೆ.

ಒಟ್ಟಾರೆ ಸುವರ್ಣ ಗ್ರಾಮೋದಯ ಯೋಜನೆಯ ಮೂಲ ಉದ್ದೇಶಗಳು ಮತ್ತು ಫಲಶೃತಿಗಳು ರಾಜ್ಯದ ಗ್ರಾಮೀಣ ಪ್ರದೇಶಗಳ ಬಡ ಹಾಗೂ ಬುಡಮಟ್ಟದ ಜನತೆಗೆ ತಲುಪುವಂತಾಗಬೇಕು. ಈ ನಿಟ್ಟಿನಲ್ಲಿ ನಮ್ಮೆಲ್ಲಾ ಅಧಿಕಾರಿ ಸಿಬ್ಬಂಧಿ ವರ್ಗದವರು ಪಾರದರ್ಶಕ ಆಡಳಿತದೊಂದಿಗೆ ಮತ್ತಷ್ಟು ಕ್ರಿಯಾಶೀಲತೆ ಹಾಗೂ ವಿವೇಚನೆಯಿಂದ ಕಾರ್ಯನಿರ್ವಹಿಸುವಂತಾಗಲಿ, ತನ್ಮೂಲಕ ಯೋಜನೆಯು ಯಶಸ್ವಿಯಾಗಲಿ.

ಯಶೋಗಾಥೆ

# ¸ÀÄªÀtð UÁæªÉÆÃzÀAiÀÄ AiÉÆÃd£ÉAiÀÄ AiÀıÀ¸Àé C£ÀĵÁ×£ÀzÀ°è zÁ°¸ÀÄUÀ¼ÀÄ

ಸುವರ್ಣ ಗ್ರಾಮೋದಯ ಯೋಜನೆ ಒಂದು ಪ್ರಗತಿ ಪರ ಅಭಿವೃದ್ಧಿಶೀಲ ಯೋಜನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆ ಮತ್ತು ಶಿವನಹಳ್ಳಿ ಗ್ರಾಮಗಳ ಯಶೋಗಾಥೆಗಳ ಕಿರುಚಿತ್ರಣ.

## ಸೂಲಿಬೆಲೆ ಗ್ರಾಮ



ಸೂಲಿಬೆಲೆ ಗ್ರಾಮವು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಪ್ರಮುಖ ಗ್ರಾಮಗಳಲ್ಲೊಂದಾಗಿದ್ದು, ಇದು 10,690 ಜನಸಂಖ್ಯೆ ಹೊಂದಿ ಇಲ್ಲಿ 2340 ಕುಟುಂಬಗಳು ವಾಸವಾಗಿವೆ. ಇಲ್ಲಿ ಕೃಷಿಯೇ ಮುಖ್ಯ ಕಸುಬಾಗಿದ್ದು ತರಕಾರಿ ಬೆಳೆಗಳನ್ನು ಬೆಳೆಯುವಲ್ಲಿ ಯಶಸ್ವಿಯಾಗಿರುತ್ತಾರೆ. ಮೂರನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಈ ಗ್ರಾಮದಲ್ಲಿ ಯೋಜನೆಯು ಯಶಸ್ವಿ ರೀತಿಯಲ್ಲಿ ವಿವಿಧ ಕಾಮಗಾರಿಗಳು ಅನುಷ್ಠಾನಗೊಂಡು ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಮಾದರಿಯಾಗಿದೆ. ರೂ.53.54 ಲಕ್ಷ ರೂಗಳಲ್ಲಿ 3.00 ಕಿ.ಮೀ ಉದ್ದದ ಸಿಮೆಂಟ್ ಕಾಂಕ್ರಿಟ್ ರಸ್ತೆ, ರೂ.54.77 ಲಕ್ಷ ರೂಗಳಲ್ಲಿ 7.00ಕಿ.ಮೀ ಉದ್ದದ ಮೆಟಲ್ ಮತ್ತು ಬಿಟುಮಿನಸ್ ರಸ್ತೆ, 5.73 ಲಕ್ಷ ರೂಗಳಲ್ಲಿ ಚರಂಡಿ ನಿರ್ಮಾಣ, 10.50 ಲಕ್ಷ ರೂಗಳಲ್ಲಿ ಎರಡು ಅಂಗನವಾಡಿ ಕಟ್ಟಡಗಳು, 27.61 ಲಕ್ಷ ರೂ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣಗೊಂಡಿರುತ್ತದೆ. ಇದರ ಜೊತೆಗೆ ತ್ಯಾಜ್ಯ ವಿಲೇವಾರಿ ಕಾರ್ಯಕ್ರಮಗಳ ವಿಶೇಷ ಒತ್ತು ನೀಡಿ ತ್ಯಾಜ್ಯ ವಿಲೇವಾರಿ ಘಟಕವನ್ನು ಸ್ಥಾಪಿಸಲು ಅಣಿಯಾಗಿದ್ದು, ಇದಕ್ಕಾಗಿ ತ್ಯಾಜ್ಯವನ್ನು ಶೇಖರಿಸುವ ಸ್ಥಳ ನಿಗದಿತಗೊಳಿಸಿ ಹತ್ತಿರದಲ್ಲಿ ಒಂದು ಶೆಡ್ ನಿರ್ಮಾಣ ಮಾಡಿ, ಎರೆಹುಳು ಗೊಬ್ಬರ ತಯಾರಿಕಾ ಘಟಕವನ್ನು ಸ್ಥಾಪಿಸಲಾಗಿದೆ. ಅಲ್ಲದೆ ವಿಂಡ್ರಾ ಪದ್ಧತಿಯಿಂದ ಕಾಂಪೋಸ್ಟ್ ಗೊಬ್ಬರ ತಯಾರಿಕೆಗಾಗಿ ತ್ಯಾಜ್ಯ ವಿಂಗಡಣ ಯಂತ್ರವನ್ನು ಖರೀದಿಸಿ ಈಗಾಗಲೆ ಇ-ಪ್ರಕ್ಯೂರ್‌ಮೆಂಟ್ ಮುಖೇನ ಈಕೋಸಿಸ್ ಕನ್ಸಲ್ಟೆನ್ಸಿಸ್ ಕಂಪನಿಯ ಮೂಲಕ ಅನುಷ್ಠಾನಗೊಳಿಸಲು ಕಾರ್ಯಕೈಗೊಂಡಿದ್ದು ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ವಿಲೇವಾರಿ ಕಾರ್ಯಕ್ರಮ ರೂಪಿಸಿದ ಗ್ರಾಮ ಎಂಬ ಖ್ಯಾತಿಗೂ ಪಾತ್ರವಾಗಿವೆ.



ಯೋಜನೆಯ ಇತರೆ ಭಾಗಗಳಾದ ಐ.ಇ.ಸಿ., ತರಬೇತಿ, ಸೋಲಾರ್ ದೀಪ ಹೀಗೆ ಎಲ್ಲಾ ವಿಭಾಗಗಳಲ್ಲೂ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಇದು ಒಂದು ಮಾದರಿ ಗ್ರಾಮವಾಗಿ ಪರಿಗಣಿಸಲ್ಪಟ್ಟಿದೆ.



## ಶಿವನಹಳ್ಳಿ ಗ್ರಾಮ:

ಶಿವನಹಳ್ಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನಕಪುರ ತಾಲ್ಲೂಕಿನ ಒಂದು ಪುಟ್ಟ ಗ್ರಾಮವಾಗಿದ್ದು ಸುಮಾರು 703 ಕುಟುಂಬಗಳು ವಾಸಿಸುವ ಈ ಗ್ರಾಮದಲ್ಲಿ ಒಟ್ಟು ಜನಸಂಖ್ಯೆ 3335 ಇರುತ್ತದೆ. ಗ್ರಾಮದ ಭೌಗೋಳಿಕ ವಿಸ್ತೀರ್ಣ 1375.20 ಎಕರೆ ಪ್ರದೇಶ ವ್ಯಾಪ್ತಿಯಲ್ಲಿ ಹರಡಿಕೊಂಡಿದ್ದು 823.31 ಎಕರೆ ತರಿ ಜಮೀನನ್ನು ಹೊಂದಿ ಮುಖ್ಯ ಕಸುಬಾದ ಕೃಷಿಯನ್ನೆ ಅವಲಂಬಿತಗೊಂಡಿದೆ. ಮೂರನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಶಿವನಹಳ್ಳಿ ಗ್ರಾಮದಲ್ಲಿ ಈ ಯೋಜನೆಯಿಂದ ಅಂದಾಜು ಮೊತ್ತ 54.71 ಲಕ್ಷ ರೂಗಳಲ್ಲಿ 1.30ಕಿ.ಮೀ. ಸಿಮೆಂಟ್ ರಸ್ತೆ ಹಾಗು 0.48 ಕಿ.ಮೀ ಚರಂಡಿ ಕಾಮಗಾರಿಗಳು ಅನುಷ್ಠಾನಗೊಂಡಿರುತ್ತದೆ. ಇದರಿಂದ ಇಡೀ ಗ್ರಾಮದ ಬಹುತೇಕ ರಸ್ತೆಗಳು ಸಿಮೆಂಟ್ ಕಾಂಕ್ರೀಟ್ ರಸ್ತೆಗಳಾಗಿ ಮಾರ್ಪಾಡುಗೊಂಡು, ಸುವ್ಯವಸ್ಥಿತ ಚರಂಡಿ ನಿರ್ಮಾಣಗೊಂಡು ಗ್ರಾಮದ ಅಭ್ಯುದಯಕ್ಕೆ ಪೂರಕವಾಗಿ ಯೋಜನೆ ಪರಿಣಾಮಕಾರಿ ಅನಷ್ಠಾನದ ಬಗೆಗೆ ಇದು ಕೂಡ ಒಂದು ಉತ್ತಮ ಉದಾಹರಣೆಯಾಗಿದೆ.



# ¸ÀÄªÀtð UÁæªÉÆÃzÀAiÀÄ- UÀzÀUÀ f¯ÉèAiÀÄ AiÀıÉÆÃUÁxÉ

ಗದಗ ಜಿಲ್ಲೆಯು ಐದು ತಾಲೂಕುಗಳನ್ನು ಒಳಗೊಂಡಿದ್ದು, ಸುವರ್ಣ ಗ್ರಾಮೋದಯ ಯೋಜನೆಯಡಿ ಮೊದಲನೆ ಹಂತದಲ್ಲಿ 19 ಮತ್ತು ಮೂರನೆಯ ಹಂತದಲ್ಲಿ 21 ಗ್ರಾಮಗಳು ಆಯ್ಕೆಯಾಗಿದ್ದು, ಒಟ್ಟು 40 ಗ್ರಾಮಗಳಲ್ಲಿ 3233.29 ಲಕ್ಷ ರೂಗಳನ್ನು ಖರ್ಚು ಮಾಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. 5 ನೇ ಹಂತದಲ್ಲಿ 27 ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು, 1805.00 ಲಕ್ಷ ರೂ ಗಳನ್ನು ಹಂಚಿಕೆ ಮಾಡಿ 837.63 ಲಕ್ಷ ರೂ ಗಳನ್ನು ಅನುಷ್ಠಾನಕ್ಕಾಗಿ ಬಳಸಲಾಗಿದೆ.

ಗದಗ ಜಿಲ್ಲೆ ಒಟ್ಟು ಐದು ತಾಲ್ಲೂಕುಗಳನ್ನು ಒಳಗೊಂಡಿದ್ದು ಸುವರ್ಣ ಗ್ರಾಮೋದಯ ಯೋಜನೆಯಡಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಈ ಬಗ್ಗೆ ಒಂದು ಕಿರುನೋಟ

## ತರಬೇತಿ ಕಾರ್ಯಕ್ರಮಗಳು:

ಸದರಿ ಯೋಜನೆಯಡಿ 1 ಮತ್ತು 3 ನೇ ಹಂತದಲ್ಲಿ 122.029 ಲಕ್ಷ ರೂ ವೆಚ್ಚದಲ್ಲಿ ಒಟ್ಟು 2090 ಅಭ್ಯರ್ಥಿಗಳಿಗೆ ಗಣಕಯಂತ್ರ ವಿಷಯದಲ್ಲಿ ಮತ್ತು ಹೊಲಿಗೆ ಯಂತ್ರ ತರಬೇತಿ ನೀಡಲಾಗಿದೆ.

## ರಸ್ತೆ ಮತ್ತು ಚರಂಡಿ ಕಾಮಗಾರಿಗಳು:

5ನೇ ಹಂತದಲ್ಲಿ ಆಯ್ಕೆಯಾಗಿರುವ 27 ಗ್ರಾಮಗಳ ಪೈಕಿ 5 ಗ್ರಾಮಗಳ ಕಾಮಗಾರಿಯನ್ನು ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಗದಗ ಮತ್ತು 22 ಗ್ರಾಮಗಳ ಕಾಮಗಾರಿಯನ್ನು KRIDL ಗದಗ ಇವರಿಗೆ ವಹಿಸಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ. ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ 1199.10 ಲಕ್ಷ ರೂ ಗಳನ್ನು ಮೀಸಲಿರಿಸಲಾಗಿದೆ. ಮತ್ತು 1 ಮತ್ತು 3 ನೇ ಹಂತದ 40 ಗ್ರಾಮಗಳಲ್ಲಿ 2032.28 ಲಕ್ಷ ರೂ ಗಳನ್ನು ಖರ್ಚು ಮಾಡಿ ರಸ್ತೆ ಮತ್ತು ಚರಂಡಿ ಕಾಮಗಾರಿ ಅನುಷ್ಠಾನ ಗೊಳಿಸಲಾಗಿದೆ.



ನಿಲಗುಂದ ಗ್ರಾಮದಲ್ಲಿ ಯೋಜನೆಯಡಿ ನಿರ್ಮಿಸಲಾದ ರಸ್ತೆ ಕಾಮಗಾರಿ

## ಸೋಲಾರ ದೀಪಗಳ ಅಳವಡಿಕೆ:

ಸದರಿ ಯೋಜನೆಯಡಿ ಐದನೆ ಹಂತದ 27 ಗ್ರಾಮಗಳ ಪೈಕಿ ಶೇಕಡಾ 2ರಷ್ಟು ಅನುದಾನವನ್ನು 35.70 ಲಕ್ಷ ರೂ ಹಂಚಿಕೆ ಮಾಡಿ 162 ಸೋಲಾರ್ ದೀಪಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.



## ಅಂಗನವಾಡಿ ಕಟ್ಟಡ ಕಾಮಗಾರಿ ವಿವರ:

1 ಮತ್ತು 3 ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಅಂಗನವಾಡಿ ಕಟ್ಟಡ ಕಾಮಗಾರಿಗೆ 129.39 ಲಕ್ಷ ರೂ ಗಳನ್ನು ಹಂಚಿಕೆ ಮಾಡಿ 66.47 ಲಕ್ಷ ರೂ ಗಳ ವೆಚ್ಚದಲ್ಲಿ ಒಟ್ಟು 13 ಅಂಗನವಾಡಿ ಕಟ್ಟಡ ಕಾಮಗಾರಿಗಳನ್ನು ನಿರ್ಮಿಸಲಾಗಿದೆ. ಉಳಿಕೆ ಕಟ್ಟಡ ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ. 5 ನೇ ಹಂತದಲ್ಲಿ 63.03 ಲಕ್ಷ ರೂ ಗಳನ್ನು ಅಂಗನವಾಡಿ ಕಟ್ಟಡ ಕಾಮಗಾರಿ ಕೈಗೊಳ್ಳಲು ಯೋಜಿಸಲಾಗಿದೆ.

## ಸಮುದಾಯ ಭವನ ಕಟ್ಟಡದ ಕಾಮಗಾರಿ:

1 ಮತ್ತು 3 ನೇ ಹಂತದಲ್ಲಿ 472.93 ಲಕ್ಷ ರೂಗಳನ್ನು ಹಂಚಿಕೆ ಮಾಡಿ 444.16 ಖರ್ಚು ಮಾಡಿ ಒಟ್ಟು 27 ಸಮುದಾಯ ಭವನ ಕಟ್ಟಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

## ಘನ ಮತ್ತು ತ್ಯಾಜ್ಯ ವಸ್ತು ವಿಲೇವಾರಿ:

1 ಮತ್ತು 3 ನೇ ಹಂತದಲ್ಲಿ ಘನ ತ್ಯಾಜ್ಯ ವಸ್ತು ವಿಲೇವಾರಿ ಮಾಡಲು 176.38 ಲಕ್ಷ ಹಂಚಿಕೆ ಮಾಡಿ 21.00 ಲಕ್ಷ ಖರ್ಚು ಮಾಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. 5 ನೇ ಹಂತದಲ್ಲಿ ಶೇಕಡಾ 40 ರಷ್ಟು ಅನುದಾನ 46.27 ಲಕ್ಷ ರೂ ಗಳನ್ನು ಹಂಚಿಕೆ ಮಾಡಿ ಘನ ತ್ಯಾಜ್ಯ ವಸ್ತು ವಿಲೇವಾರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಒಟ್ಟಾರೆ ಗದಗ ಜಿಲ್ಲೆಯ 339 ಗ್ರಾಮಗಳ ಪೈಕಿ 67 ಗ್ರಾಮಗಳಲ್ಲಿ ಈ ವರೆಗೆ ಸುವರ್ಣ ಗ್ರಾಮೋದಯ ಯೋಜನೆಯನ್ನು ಅನುಷ್ಠಾನಗೊಳಿಸಿ ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸಲು ಕ್ರಮ ವಹಿಸಲಾಗಿದೆ.



ನಿಡಗುಂದಿ ಗ್ರಾಮದಲ್ಲಿ ರಸ್ತೆ ಕಾಮಗಾರಿ

# ªÉÄʸÀÆgÀÄ f¯Éè n.£ÀgÀ¹Ã¥ÀÄgÀ vÁ®ÆèQ£À ªÀÄ°AiÀÄÆgÀÄ - ¸ÀÄªÀtð UÁæªÉÆÃzÀAiÀÄ

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ಮಲಿಯೂರು ಗ್ರಾಮವು ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರದಿಂದಸುಮಾರು 33 ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಟ್ಟು ಜನಸಂಖ್ಯೆಯು 3452 ಇದ್ದು, ಈ ಪೈಕಿ ಮಹಿಳೆಯರು 1782 ಮತ್ತು ಪುರುಷರು 1670 ಉದ್ದು, ಗ್ರಾಮದಲ್ಲಿ ಒಟ್ಟು 694 ಕುಟುಂಬಗಳು ವಾಸವಿದ್ದು, ಈ ಪೈಕಿ 650 ಕುಟುಂಬಗಳು ಬಡತನ ರೇಖೆಗಿಂತ ಕೆಳಗಿರುತ್ತವೆ. ಈ ಗ್ರಾಮವು ಹೆಚ್ಚಿನ ಜನಸಾಂದ್ರತೆಯಿಂದ ಕೂಡಿದ್ದು, ಉತ್ತಮ ಪರಿಸರ ಇಲ್ಲದೆ ಕಿರಿದಾದ ರಸೆಗಳು, ಚರಂಡಿ ವ್ಯವಸ್ಥೆ ಇಲ್ಲದೆ ಅಲ್ಲಲ್ಲಿ ನೀರು ನಿಂತು ಗ್ರಾಮವು ಅನೈರ್ಮಲ್ಯದಿಂದ ಕೂಡಿದ್ದ ಗ್ರಾಮವಾಗಿತ್ತು.


ಈ ಗ್ರಾಮದಲ್ಲಿ ಜನಸಾಂದ್ರತೆ ಹೆಚ್ಚು. ಕಿರಿದಾದ ರಸ್ತೆಗಳು ಮತ್ತು ಚರಂಡಿ ವ್ಯವಸ್ಥೆ ಇಲ್ಲದ ಗ್ರಾಮ ಇದಾಗಿತ್ತು. ಆದರೆ ಯೋಜನೆಯಡಿ ಆದ ಅಭಿವೃದ್ಧಿಯ ಬಗ್ಗೆ ಇಲ್ಲಿನ ಗ್ರಾಮಸ್ಥರು ಸಂತುಷ್ಟರಾಗಿದ್ದಾರೆ.

ಇಂತಹ ಹಿಂದುಳಿದ ಗ್ರಾಮವನ್ನು ಅಭಿವೃದ್ಧಿಪಡಿಸಲು ಸುವರ್ಣ ಗ್ರಾಮ ಯೋಜನೆಯ 3ನೇ ಹಂತದಲ್ಲಿ ಆಯ್ಕೆ ಮಾಡಲು ನಿರ್ಧರಿಸಿ ಮೊದಲು ಗ್ರಾಮದಲ್ಲಿ ಕೈಗೊಳ್ಳಬೇಕಾದ ಅವಶ್ಯಕ ಕಾಮಗಾರಿಗಳ ವಿವರಗಳನ್ನು ವಿ.ಡಿ.ಪಿ. ಮೂಲಕ ಸಿದ್ದಪಡಿಸಲು ಗ್ರಾಮಕ್ಕೆ ತೆರಳಿದ ಸಂದರ್ಭದಲ್ಲಿ ಸುವರ್ಣ ಗ್ರಾಮ ಯೋಜನೆಯಲ್ಲಿ ಮಲಿಯೂರು ಗ್ರಾಮವನ್ನು ಆಯ್ಕೆ ಮಾಡಿರುವ ವಿಷಯ ತಿಳಿಸಿದ ಸಂದರ್ಭದಲ್ಲಿ ಗ್ರಾಮಸ್ಥರು ಬಹಳ ಹೆಮ್ಮೆ ಪಟ್ಟು ಗ್ರಾಮಾಭಿವೃದ್ಧಿ ಯೋಜನೆ ತಯಾರಿಸಲು ಸಂಪೂರ್ಣ ಸಹಕಾರ ನೀಡಿ ಗ್ರಾಮದಲ್ಲಿ ಅಗತ್ಯವಾಗಿ ಕೈಗೊಳ್ಳಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ನೀಡಿರುತ್ತಾರೆ.



ಅಂದು

ಇಂದು



ಮೇಲ್ಕಂಡಂತೆ ಇದ್ದ ರಸ್ತೆಯನ್ನು ಸುವರ್ಣ ಗ್ರಾಮ ಯೋಜನೆಯಲ್ಲಿ ಅಭಿವೃದ್ಧಿಪಡಿಸಿದ ನಂತರ ರಸ್ತೆಯು ಈ ಕೆಳಕಂಡಂತೆ ರೂಪುಗೊಂಡಿರುತ್ತದೆ.

ಗ್ರಾಮಾಭಿವೃದ್ದಿ ಯೋಜನೆ ಸಿದ್ದಗೊಂಡ ನಂತರ ಗ್ರಾಮದಲ್ಲಿ ಅಂದಾಜು ವೆಚ್ಚ ರೂ 86.15 ಲಕ್ಷಗಳಿಗೆ ಯೋಜನೆಯನ್ನು ಅನುಷ್ಠಾನ ಗೊಳಿಸಲು ಕೈಗೆತ್ತಿಕೊಳ್ಳಲಾಯಿತು. ಗ್ರಾಮದಲ್ಲಿ ರೂ 25.00 ಲಕ್ಷಗಳ ವೆಚ್ಚದಲ್ಲಿ ರಸ್ತೆ ನಿರ್ಮಿಸಲಾಗಿದ್ದು, ರೂ 26.69 ಲಕ್ಷಗಳ ವೆಚ್ಚದಲ್ಲಿ ಚರಂಡಿ ನಿರ್ಮಿಸಲಾಗಿರುತ್ತದೆ. ರೂ 12.92 ಲಕ್ಷಗಳ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಲಾಗಿದೆ.



ಗ್ರಾಮದಲ್ಲಿನ ಪ್ರಮುಖ ರಸ್ತೆಯನ್ನು ಈ ಕೆಳಕಂಡಂತೆ ಅಭಿವೃದ್ಧಿಪಡಿಸಲಾಗಿದ್ದು, ಒಟ್ಟಾರೆ ಗ್ರಾಮದ ರಸ್ತೆಗಳನ್ನು ಸುವರ್ಣ ಗ್ರಾಮ ಯೋಜನೆಯಲ್ಲಿ ಅಭಿವೃದ್ಧಿಪಡಿಸಿದ ನಂತರ ಗ್ರಾಮದ ಚಿತ್ರಣವೇ ಬದಲಾಗಿರುತ್ತದೆ. ಈ ರೀತಿ ರಸ್ತೆಗಳು ಮತ್ತು ಚರಂಡಿಗಳನ್ನು ಅಭಿವೃದ್ದಿ ಪಡಿಸಿದ ನಂತರ ಗ್ರಾಮಸ್ಥರು ಬಹಳ ಸಂತಸದಿಂದ ಈ ಯೋಜನೆಯಲ್ಲಿ ಆಗಿರುವ ಕಾಮಗಾರಿಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುತ್ತಾರೆ.



ಗ್ರಾಮದಲ್ಲಿ ಈ ಹಿಂದೆ ಯಾವುದೇ ಶುಭ ಸಮಾರಂಭಗಳನ್ನು ಮಾಡಬೇಕಾದಲ್ಲಿ ದೇವಸ್ಥಾನದ ಆವರಣದಲ್ಲಿ ಮತ್ತು ಮನೆಯ ಮುಂಭಾಗದ ಕಿರಿದಾದ ರಸ್ತೆಗಳಲ್ಲಿ ನಡೆಸುತ್ತಿದ್ದು, ಇದರಿಂದ ಜನರಿಗೆ ಬಹಳ ಅನಾನುಕೂಲವಾಗಿದ್ದರಿಂದ ಗ್ರಾಮಸ್ಥರ ಕೋರಿಕೆಯಂತೆ ಅಂದಾಜು ರೂ 12.92 ಲಕ್ಷಗಳ ವೆಚ್ಚದಲ್ಲಿ ಒಂದು ಸಮುದಾಯ ಭವನವನ್ನು ನಿರ್ಮಾಣ ಮಾಡಲಾಗಿರುತ್ತದೆ. ಸಮುದಾಯ ಭವನ ನಿರ್ಮಾಣವಾದ ನಂತರ ಎಲ್ಲಾ ಸಮುದಾಯದವರೂ ಈ ಭವನದ ಉಪಯೋಗವನ್ನು ಪಡೆಯುತ್ತಿದ್ದು, ಈ ಸಮುದಾಯ ಭವನ ನಿರ್ಮಾಣದಿಂದ ಎಲ್ಲಾ ಸಮುದಾಯದವರಿಗೂ ಬಹಳ ಅನುಕೂಲ ವಾಗಿರುವುದಾಗಿ ಗ್ರಾಮಸ್ಥರು ಸಂತಸಪಡುತ್ತಾರೆ

ಗ್ರಾಮದಲ್ಲಿರುವ ನಿರುದ್ಯೋಗ ಯುವಕ/ಯುವತಿಯರಿಗೆ ಕಿಯೋನಿಕ್ಸ್ ತರಬೇತಿ ಕೇಂದ್ರದ ಮೂಲಕ ಉತ್ತಮ ಗುಣಮಟ್ಟದ ತರಬೇತಿಯನ್ನು ನೀಡಲು ಗ್ರಾಮದಲ್ಲಿ ಸುಮಾರು 80 ಜನ ನಿರುದ್ಯೋಗಿಗಳನ್ನು ಆಯ್ಕೆ ಮಾಡಲು ಕ್ರಮ ವಹಿಸಲಾಗಿದೆ. ಗ್ರಾಮವು ಈ ಮೊದಲು ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲದೆ ಇದ್ದ ಗ್ರಾಮವನ್ನು ಸುವರ್ಣ ಗ್ರಾಮ ಯೋಜನೆಯಲ್ಲಿ ಕೈಗೆತ್ತಿಕೊಂಡು ಇಂದು ಮಾದರಿ ಗ್ರಾಮವನ್ನಾಗಿ ರೂಪಿಸಲಾಗಿದೆ.

ಯಶೋಗಾಥೆ

# zÀQët PÀ£ÀßqÀ f¯ÉèAiÀÄ - ¸ÀĪÀtð UÁæªÉÆÃzÀAiÀÄ

ಒಂದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ 32 ಗ್ರಾಮಗಳು ಆಯ್ಕೆಯಾಗಿದ್ದು, ಒಟ್ಟು ರೂ. 3100.04 ಲಕ್ಷ ಅನುದಾನವನ್ನು ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಿಗದಿಗೊಳಿಸಲಾಗಿದೆ. ಯೋಜನೆಯಡಿ ನಿಗದಿಪಡಿಸಿದ ಸಂಪೂರ್ಣ ಅನುದಾನ ಬಿಡುಗಡೆಯಾಗಿದ್ದು, ರೂ 3031.846 ಲಕ್ಷ ಖರ್ಚಾಗಿರುತ್ತದೆ. ರೂ 1967.01 ಲಕ್ಷ ಅನುದಾನದಲ್ಲಿ 440 ರಸ್ತೆ ಕಾಮಗಾರಿಗಳು, ರೂ 451.67 ಲಕ್ಷ ಅನುದಾನದಲ್ಲಿ 152 ಚರಂಡಿ ಕಾಮಗಾರಿಗಳು, ರೂ199.26 ಅನುದಾನದಲ್ಲಿ 135 ಅಂಗನವಾಡಿ ಕಟ್ಟಡಗಳು, ರೂ258.56 ಲಕ್ಷ ವೆಚ್ಚದಲ್ಲಿ 33 ಸಮುದಾಯ ಭವನ ಹಾಗೂ ರೂ 66.57 ಲಕ್ಷ ವೆಚ್ಚದಲ್ಲಿ 32 ತ್ಯಾಜ್ಯ ಘಟಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಮೂರನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ 33 ಗ್ರಾಮಗಳು ಆಯ್ಕೆಯಾಗಿದ್ದು, ಒಟ್ಟು ರೂ3100.00 ಲಕ್ಷ ಅನುದಾನ ನಿಗದಿಗೊಳಿಸಲಾಗಿರುತ್ತದೆ. ಯೋಜನೆಯಡಿ ನಿಗದಿಪಡಿಸಿದ ಸಂಪೂರ್ಣ ಅನುದಾನ ಬಿಡುಗಡೆಯಾಗಿದ್ದು, ರೂ2882.620 ಲಕ್ಷ ಖರ್ಚಾಗಿರುತ್ತದೆ. ರೂ1756.08 ಲಕ್ಷ ಅನುದಾನದಲ್ಲಿ 308 ರಸ್ತೆ ಕಾಮಗಾರಿಗಳು, ರೂ116.845 ಲಕ್ಷ ವೆಚ್ಚದಲ್ಲಿ 54 ಚರಂಡಿ ಕಾಮಗಾರಿಗಳು, ರೂ308.748 ಲಕ್ಷ ವೆಚ್ಚದಲ್ಲಿ 168 ಅಂಗನವಾಡಿ ಕಟ್ಟಡಗಳು, ರೂ470.635 ಲಕ್ಷ ವೆಚ್ಚದಲ್ಲಿ 36 ಸಮುದಾಯ ಭವನ ಕಾಮಗಾರಿಗಳು ಹಾಗೂ ರೂ141.749 ಲಕ್ಷ ವೆಚ್ಚದಲ್ಲಿ 30 ಘನ ತ್ಯಾಜ್ಯ ವಿಲೇವಾರಿ ಘಟಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ 32 ಗ್ರಾಮಗಳು ಆಯ್ಕೆಯಾಗಿದ್ದು, ರೂ3350.00 ಲಕ್ಷ ಅನುದಾನ ನಿಗದಿಯಾಗಿರುತ್ತದೆ. 32 ಗ್ರಾಮಗಳ ಕ್ರಿಯಾ ಯೋಜನೆಯ ಅಂತಿಮವಾಗಿರುತ್ತದೆ.

ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಜನಜೀವನವನ್ನು ಉತ್ತಮಪಡಿಸಿ ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸಲು ಅನುಕೂಲವಾಗಿರುತ್ತದೆ. ಭೂ ಆಧಾರಿತ ಚಟುವಟಿಕೆಗಳಲ್ಲಿ ಆದಾಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದಕ್ಕಾಗಿ ವಿವಿಧ ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಲಾಗಿರುತ್ತದೆ. ಇವುಗಳಲ್ಲಿ

**ಸಾಕ್ಷರತೆ ಮತ್ತು ನಾಗರೀಕ ಪ್ರಜ್ಞೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಯಾವಾಗಲೂ ಮುಂದು. ಯೋಜನೆಗಳ ಯಶಸ್ವಿ ಅಳವಡಿಕೆ, ಬಳಕೆ ಮತ್ತು ಅಭಿವೃದ್ಧಿಯಲ್ಲಿ ಸದಾ ಮುಂದು ಹಾಗೆಯೇ ಸುವರ್ಣ ಗ್ರಾಮೋದಯ ಯೋಜನೆಯ ಅಭಿವೃದ್ಧಿಯ ಬಗ್ಗೆ ಒಂದಿಷ್ಟು . . .**

ಗಣಕಯಂತ್ರ ತರಬೇತಿ ಮತ್ತು ವಾಹನ ಚಾಲನಾ ತರಬೇತಿಗಳು ಅತೀ ಪ್ರಾಮುಖ್ಯತೆಯನ್ನು ಪಡೆದಿದ್ದು, ಯುವ ಜನತೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಹಾಗೂ ಸ್ವ ಉದ್ಯೋಗ ಹೊಂದಲು ಸಾಧ್ಯವಾಗಿರುತ್ತದೆ.



### ಲಾಯಿಲ ಗ್ರಾಮದ ಘನ ತ್ಯಾಜ್ಯ ವಿಲೇವಾರಿ ಘಟಕ

ಬೆಳ್ತಂಗಡಿ ತಾಲೂಕು ಲಾಯಿಲ ಗ್ರಾಮವು ಒಂದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿದ್ದು ತ್ಯಾಜ್ಯ ವಿಲೇವಾರಿಗಾಗಿ ಸುವರ್ಣ ಗ್ರಾಮೋದಯ ಯೋಜನೆಯಡಿ ರೂ 3.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ರೂ. 3.40 ಲಕ್ಷ ಅನುದಾನವನ್ನು ಉಪಯೋಗಿಸಿ ಘನ ತ್ಯಾಜ್ಯ ವಿಲೇವಾರಿ ಘಟಕದ ಕಟ್ಟಡವನ್ನು ನಿರ್ಮಿಸಲಾಗಿದೆ. ಇದರೊಂದಿಗೆ ನಿರ್ಮಲ ಭಾರತ ಪುರಸ್ಕಾರದ ಮೊತ್ತವನ್ನು ಸೇರಿಸಿ ವಿವಿಧ ವ್ಯವಸ್ಥೆಗಳನ್ನು ಒದಗಿಸಿ ಉತ್ತಮ ರೀತಿಯಲ್ಲಿ ಘಟಕದ ನಿರ್ವಹಣೆಯನ್ನು ಮಾಡಲಾಗುತ್ತಿದೆ.

ಪ್ರಸ್ತುತ ಘನ ತ್ಯಾಜ್ಯ ವಿಲೇವಾರಿ ಘಟಕ ಇರುವ ಜಾಗದಲ್ಲಿ ಮೊದಲು ಒಂದು ತಿಪ್ಪೆಗುಂಡಿ ಇದ್ದು, ಸಾರ್ವಜನಿಕರು ಅಲ್ಲಿ ಒಟ್ಟಾರೆಯಾಗಿ ಕಸವನ್ನು ಬಿಸಾಡುತ್ತಿದ್ದರು. ಈ ಪ್ರದೇಶವು ತುಂಬಾ ಗಲೀಜಿನಿಂದ ಕೂಡಿದ್ದು, ಈಗ ಅದೇ ಪ್ರದೇಶದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಯಾಗಿದ್ದು, ಈಗ ಇಲ್ಲಿ ಒಂದು ಸುಂದರವಾದ ಹೂದೋಟ ನಿರ್ಮಾಣವಾಗಿದೆ. ಅಲ್ಲದೆ ಈಗ ಇದು ಸಾರ್ವಜನಿಕರು ವಿರಾಮದ ವೇಳೆ ವಿಶ್ರಾಂತಿ ಪಡೆಯುವಂತಹ ಸುಂದರವಾದ ತಾಣವಾಗಿದೆ. ಗ್ರಾಮದ 5 ಕಡೆ ಪ್ಲಾಸ್ಟಿಕ್ ಮನೆಗಳನ್ನು ನಿರ್ಮಾಣ ಮಾಡಿ ಕಸವನ್ನು ಅದಕ್ಕೆ ಹಾಕುವಂತಹ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಗ್ರಾಮದ ಎಲ್ಲಾ ಅಂಗಡಿಗಳಿಗೆ ಪಂಚಾಯತ್ ವತಿಯಿಂದ ಪ್ಲಾಸ್ಟಿಕ್ ಬಕೆಟ್‌ಗಳನ್ನು ನೀಡಿದ್ದು, ಅದರಲ್ಲಿನ ಕಸವನ್ನು ಪ್ರತಿ ಎರಡು ದಿನಗಳಿಗೊಮ್ಮೆ ಶೇಖರಿಸಿ ಗೊಬ್ಬರ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಗೊಬ್ಬರವು ತುಂಬಾ ಸಾವಯವಯುಕ್ತವಾಗಿದ್ದು, ಉತ್ತಮ ಬೇಡಿಕೆ ಇರುತ್ತದೆ. ಗ್ರಾಮದಲ್ಲಿ 24 ಕಡೆ ಸಿಮೆಂಟ್

ತೊಟ್ಟಿಗಳನ್ನು ನಿರ್ಮಾಣ ಮಾಡಿದ್ದು, ಅದರಲ್ಲಿ ಶೇಖರಣೆಯಾದ ಕಸವನ್ನು ಸಹ ಗೊಬ್ಬರ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ. ಈ ಗೊಬ್ಬರದ ಅವಶ್ಯಕತೆಯನ್ನು ಗ್ರಾಮೀಣ ಜನರು ಮನಗಂಡಿದ್ದು, ಅವರುಗಳೇ ಸ್ವತಃ ಮನೆಯಲ್ಲಿಯೇ ಕಸದಿಂದ ಗೊಬ್ಬರ ತಯಾರಿಸಲು ಪ್ರಾರಂಭಿಸಿರುತ್ತಾರೆ.

ಈ ಯೋಜನೆಯನ್ನು ಪ್ರಾರಂಭಿಸುವ ಪ್ರಾಥಮಿಕ ಹಂತದಲ್ಲಿ ಅಂಗಡಿ ಯವರಿಂದ ಹಾಗೂ ಸಾರ್ವಜನಿಕರಿಂದ ಸಮಸ್ಯೆಗಳು ಎದುರಾಗಿದ್ದು, ನಿರಂತರ ಅರಿವುಮೂಡಿಸುವುದರ ಮೂಲಕ ಜನರ ಮನವೊಲಿಸಿ ಈ ಸಾಧನೆಯನ್ನು ಮಾಡಲಾಗಿದೆ. ಪ್ರಸ್ತುತ ಕರಗುವ ಕಸ ಹಾಗೂ ಕರಗದೆ ಇರುವ ಕಸ ಬೇರ್ಪಡಿಸಲು ಸ್ವಲ್ಪ ಮಟ್ಟಿನ ಕಾರ್ಮಿಕರ ಸಮಸ್ಯೆ ಇರುತ್ತದೆ. ಗ್ರಾಮದ ನೈರ್ಮಲ್ಯವನ್ನು ಕಾಪಾಡಿ ಉತ್ತಮ ಆರೋಗ್ಯ ಒದಗಿಸುವಲ್ಲಿ ಈ ಘಟಕವು ಜಿಲ್ಲೆಗೆ ಮಾದರಿಯಾಗಿರುತ್ತದೆ.




## ಸುವರ್ಣ ಗ್ರಾಮೋದಯ ಯೋಜನೆಯಡಿ ಮಾಹಿತಿ ಶಿಕ್ಷಣ ಮತ್ತು ಸಂವಹನ (ಐ.ಇ.ಸಿ)

ಐಇಸಿ ಕಾರ್ಯಕ್ರಮಗಳಿಗೆ ಒಂದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ರೂ 19.409 ಲಕ್ಷಗಳನ್ನು ದ.ಕ. ಜಿಲ್ಲೆಗೆ ಒದಗಿಸಲಾಗಿದ್ದು, ಇದರಲ್ಲಿ ರೂ 2.707 ಲಕ್ಷ ಮೊತ್ತವನ್ನು ಆಯ್ಕೆಯಾದ ಗ್ರಾಮಗಳ ಸರ್ವೆ ಕಾರ್ಯ ನಡೆಸಿದ ಸಂಸ್ಥೆಗಳಿಗೆ ನೀಡಲಾಗಿರುತ್ತದೆ. ಎಲ್ಲಾ 32 ಗ್ರಾಮ ಪಂಚಾಯತ್‌ಗಳಲ್ಲಿ ಯೋಜನೆಯ ಬಗ್ಗೆ ಮಾಹಿತಿ ನೀಡುವ ಹೋರ್ಡಿಂಗ್ ಬೋರ್ಡ್‌ಗಳನ್ನು ಒಟ್ಟು ರೂ 16.702 ಲಕ್ಷ ವೆಚ್ಚದಲ್ಲಿ ಹಾಕಲಾಗಿದ್ದು, ಇದು ಸುವರ್ಣ ಗ್ರಾಮೋದಯ ಯೋಜನೆಯ ಬಗ್ಗೆ ಜನ ಸಾಮಾನ್ಯರಿಗೆ ಮಾಹಿತಿ ನೀಡುವಲ್ಲಿ ಸಹಕಾರಿಯಾಗಿದೆ.




ಅದೇ ರೀತಿ 3ನೇ ಹಂತದಲ್ಲಿ ಐಇಸಿ ಕಾರ್ಯಕ್ರಮಗಳಿಗೆ ರೂ. 13.17 ಲಕ್ಷ ಬಿಡುಗಡೆಯಾಗಿದ್ದು ಸರ್ವೆ ಕಾರ್ಯ ನಡೆಸಿದ ಅಂಗನವಾಡಿ ಕಾರ್ಯಕರ್ತೆಯರಿಗೆ ಒಟ್ಟು ರೂ. 3.157 ಲಕ್ಷ ಪಾವತಿಸಲಾಗಿರುತ್ತದೆ. ಹೋರ್ಡಿಂಗ್ ಬೋರ್ಡ್‌ಗಳನ್ನು ರೂ 10.015 ಲಕ್ಷ ವೆಚ್ಚದಲ್ಲಿ ಎಲ್ಲಾ 33 ಗ್ರಾಮಗಳಲ್ಲಿ ಅಳವಡಿಸಲಾಗಿರುತ್ತದೆ.



## ಸುಬ್ರಹ್ಮಣ್ಯ ಗ್ರಾಮ ಪಂಚಾಯತ್‌ನ ಘನ ತ್ಯಾಜ್ಯ ವಿಲೇವಾರಿ ಘಟಕ

ಒಂದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮ ಪಂಚಾಯತ್‌ಗೆ ತ್ಯಾಜ್ಯ ವಿಲೇವಾರಿಗಾಗಿ ರೂ. 8.152 ಲಕ್ಷ ಒದಗಿಸಲಾಗಿರುತ್ತದೆ. ಜಿಲ್ಲಾ ಪಂಚಾಯತ್ ಅನುದಾನ , ನಿರ್ಮಲ ಗ್ರಾಮ ಪುರಸ್ಕಾರದ ಮೊತ್ತ ಮತ್ತು ಗ್ರಾಮ ಪಂಚಾಯತ್‌ನ ಸ್ವಂತ ನಿಧಿ ಅನುದಾನ ಸೇರಿ ಒಟ್ಟು ರೂ 18.00 ಲಕ್ಷ ಅನುದಾನದಲ್ಲಿ ಘಟಕವನ್ನು ಸ್ಥಾಪಿಸಲಾಗಿದ್ದು ಅಂಗಡಿ/ಹೋಟೆಲ್‌ಗಳಿಂದ ಸಂಗ್ರಹಿಸಿದ ಕಸದಿಂದ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ತ್ಯಾಜ್ಯ ಬೇರ್ಪಡಿಸಲು ನಾಲ್ಕು ಜನ ಸಿಬ್ಬಂದಿಗಳಿದ್ದು ಅಂಗಡಿ/ಹೋಟೆಲ್‌ಗಳ ಮಾಲೀಕರಿಂದ ಪಡೆಯಲಾದ ಮಾಸಿಕ ಸ್ವಚ್ಛತಾ ಶುಲ್ಕದ ಮೊತ್ತದಿಂದ ಈ ನಾಲ್ಕು ಜನ ಸಿಬ್ಬಂದಿಗಳಿಗೆ ವೇತನ ಪಾವತಿಸಲಾಗುತ್ತಿದೆ. ಕಸ ವಿಲೇವಾರಿಗಾಗಿ ಒಂದು ಆಪೆ ರಿಕ್ಷಾವನ್ನು ಹೊಂದಿದ್ದು ಇದರಲ್ಲಿ ಓರ್ವ ಚಾಲಕ ಹಾಗೂ ಇಬ್ಬರು ಸಹಾಯಕರಿರುತ್ತಾರೆ. ಆಪೆ ರಿಕ್ಷವನ್ನು ಸುವರ್ಣ ಗ್ರಾಮೋದಯ ಯೋಜನೆಯ ಅನುದಾನದಿಂದ ಖರೀದಿಸಲಾಗಿದ್ದು ಇದರ ಸಿಬ್ಬಂದಿಗಳಿಗೆ ಗ್ರಾಮ ಪಂಚಾಯತ್‌ನಿಂದ ವೇತನ ಪಾವತಿಸಲಾಗುತ್ತಿದೆ. ಈ ಘಟಕದಿಂದಾಗಿ ಏಳು ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ.

ಸುಬ್ರಹ್ಮಣ್ಯ ಗ್ರಾಮವು ಪ್ರವಾಸಿ ತಾಣವಾಗಿದ್ದು ಇಲ್ಲಿ ಪ್ರವಾಸಿಗರನ್ನು ನಿಯಂತ್ರಿಸುವುದು ತುಂಬ ಕಷ್ಟಕರವಾಗಿರುತ್ತದೆ. ಮೊದಲು ಜನರು ಎಲ್ಲೆಂದರಲ್ಲಿ ಕಸವನ್ನು ಬಿಸಾಡುತ್ತಿದ್ದರು. ಈಗ ರಸ್ತೆಯಲ್ಲಿ ಕಸವನ್ನು ಬಿಸಾಡುವವರಿಗೆ ಗ್ರಾಮ ಪಂಚಾಯತ್ ವತಿಯಿಂದ ದಂಡವನ್ನು ವಿಧಿಸಲಾಗುತ್ತಿದ್ದು ಜನರು ಕಸವನ್ನು ಕಸದ ತೊಟ್ಟಿಯಲ್ಲಿಯೇ ಹಾಕುತ್ತಿದ್ದಾರೆ. ಇದರಿಂದ ಗ್ರಾಮದ ಸ್ವಚ್ಛತೆಯನ್ನು ಕಾಪಾಡಲು ಸಹಕಾರಿಯಾಗಿದೆ.

ಯಶೋಗಾಥೆ

# zÀQët PÀ£ÀqÀ f¯ÉèAiÀÄ «l¥ÀqÀÆgÀÄ UÁæªÀÄzÀ AiÀıÉÆÃUÁxÉ

ವಿಟ್ಲಪಡ್ನೂರು ಗ್ರಾಮದಲ್ಲಿ ಸುವರ್ಣ ಗ್ರಾಮೋದಯ.....

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕು ವಿಟ್ಲಪಡ್ನೂರು ಗ್ರಾಮದಲ್ಲಿ 7284 ಜನಸಂಖ್ಯೆ ಇದ್ದು, ಗ್ರಾಮದ ಯಾವುದೇ ಶುಭ ಸಮಾರಂಭಗಳನ್ನು ನೆರವೇರಿಸಲು ಸರಿಯಾದ ಸಭಾ ಭವನ ಇಲ್ಲದೆ ಇದ್ದುದರಿಂದ ಸುಮಾರು 12 ಕಿ.ಮೀ. ದೂರದ ವಿಟ್ಲ ಅಥವಾ 30 ಕಿ.ಮೀ. ಅಂತರದ ಬಂಟ್ವಾಳ ತಾಲೂಕು ಕೇಂದ್ರದಲ್ಲಿದ್ದ ಸಭಾ ಭವನಗಳನ್ನು ಆಶ್ರಯಿಸಬೇಕಾಗಿತ್ತು. ಪ್ರಕೃತ ಸುವರ್ಣ ಗ್ರಾಮ ಯೋಜನೆ ಹಂತ–3 ರಲ್ಲಿ ವಿಟ್ಲಪಡ್ನೂರು ಗ್ರಾಮದ ಕೇಂದ್ರಸ್ಥಾನದಲ್ಲಿ ರೂ. 19.65 ಲಕ್ಷ ವೆಚ್ಚದಲ್ಲಿ ವಿಸ್ತಾರವಾದ ಸಮುದಾಯ ಭವನ ನಿರ್ಮಿಸಲಾಗಿದ್ದು, ಗ್ರಾಮಸ್ಥರಿಗೆ ತಮ್ಮ ಗ್ರಾಮದ ಮದುವೆ ಇತ್ಯಾದಿ ಶುಭ ಸಮಾರಂಭಗಳನ್ನು ತಮ್ಮ ಗ್ರಾಮದಲ್ಲಿಯೇ ಇರುವ ಸಮುದಾಯ ಭವನವನ್ನು ಉಪಯೋಗಿಸಿಕೊಂಡು ನೆರವೇರಿಸಲು ಅನುಕೂಲವಾಗಿದೆ. ಇದಲ್ಲದೆ ಗ್ರಾಮ ಪಂಚಾಯತ್‌ನಲ್ಲಿ ನಡೆಯುವ ವಿವಿಧ ಚಟುವಟಿಕೆಗಳಿಗೆ ಕೂಡಾ ಇದರಿಂದ ಪ್ರಯೋಜನವಾಗಿದೆ. ಗ್ರಾಮಸ್ಥರು ಈ ಸಭಾ ಭವನದ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ.



ಯೋಜನೆಯಡಿ ಹೊಸದಾಗಿ ನಿರ್ಮಿತವಾದ ಸಮುದಾಯ ಭವನ

## ಗಂಜಿಮಠ ಗ್ರಾಮ ಪಂಚಾಯತಿ ಮುಂಭಾಗದಿಂದ ಗೋವು ಆಸ್ಪತ್ರೆವರೆಗೆ ಕಾಂಕ್ರೀಟ್ ರಸ್ತೆ





ಮಂಗಳೂರು ತಾಲೂಕು ಗಂಜಿಮಠ ಗ್ರಾಮ ಪಂಚಾಯತಿನ ಬಡಗುಳಿಪಾಡಿ ಗ್ರಾಮವು 3ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿದ್ದು, ಗ್ರಾಮ ಪಂಚಾಯತ್ ಮುಂಭಾಗದಿಂದ ಗೋವು ಆಸ್ಪತ್ರೆ ವರೆಗಿನ ರಸ್ತೆಯ ಪಕ್ಕದಲ್ಲಿ ತೋಡು ಇದ್ದು, ಹೆಚ್ಚಿಗೆ ಮರಗಳು ಇರುವುದರಿಂದ ನೀರಿನ ಒಸರು ಜಾಸ್ತಿ ಇದ್ದು, ಡಾಮರು ರಸ್ತೆ ಮಾಡಿದ್ದಲ್ಲಿ ಡಾಮರು ಎದ್ದು ಹೋಗುವುದರಿಂದ 90 ಮೀಟರ್‌ವರೆಗೆ ಕಾಂಕ್ರೀಟ್ ರಸ್ತೆ ಅಂದಾಜು ಮೊತ್ತ ರೂ. 2.00 ಲಕ್ಷದಲ್ಲಿ ನಿರ್ಮಿಸಲಾಗಿದೆ. ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತುಂಬಾ ಅನುಕೂಲವಾಗುತ್ತಿದೆ. ಗ್ರಾಮದ ಜನರು ಈ ರಸ್ತೆ ಕಾಮಗಾರಿ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿರುತ್ತಾರೆ.

## ಬಂಟ್ವಾಳ ತಾಲೂಕು ಅಮ್ಟಾಡಿ ಗ್ರಾಮದ ಕಿನ್ನಿಬೆಟ್ಟು ಸೊಸೈಟಿ ರಸ್ತೆ ಡಾಂಬರೀಕರಣ

ಸದ್ರಿ ರಸ್ತೆಯು 2.10 ಕಿ.ಮೀ. ಉದ್ದದ ರಸ್ತೆಯಾಗಿದ್ದು, ಸುಮಾರು 145 ಕುಟುಂಬಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿರುತ್ತದೆ. ಸುವರ್ಣ ಗ್ರಾಮ ಯೋಜನೆ ಮಂಜೂರಾಗುವ ಮೊದಲು ಸದ್ರಿ ರಸ್ತೆಯು ಮಣ್ಣಿನ ರಸ್ತೆಯಾಗಿದ್ದು, ಅಲ್ಲಲ್ಲಿ ದೊಡ್ಡ ದೊಡ್ಡ ಹೊಂಡಗಳು ಹಾಗೂ ದಿಣ್ಣೆಗಳಿಂದ ಕೂಡಿತ್ತು. ಪ್ರಕೃತ ಸುವರ್ಣ ಗ್ರಾಮ ಯೋಜನೆ ಅನುದಾನದಿಂದ ರಸ್ತೆಯನ್ನು ಅಭಿವೃದ್ಧಿಪಡಿಸಿ, ಡಾಂಬರೀಕರಣಗೊಳಿಸಿದ ನಂತರ ಸದ್ರಿ ರಸ್ತೆಯಲ್ಲಿ ಓಡಾಡುವ ಜನರಿಗೆ ತುಂಬಾ ಅನುಕೂಲವಾಗಿರುತ್ತದೆ.



# ಯಶೋಗಾಥೆ

## ¨ÉÆ¼Á« f¯ÉèèaPÉÆÃr vÁ®ÆèQ£À PÀ¯ÉÆèÃ¼À UÁæªÀÄzÀ
## - ¸ÀÄªÀtð UÁæªÉÆÃzÀAiÀÄ

ಕರ್ನಾಟಕ ರಾಜ್ಯವು ಸುವರ್ಣ ಕರ್ನಾಟಕವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲು ಹಮ್ಮಿಕೊಂಡ ಅಭಿವೃದ್ಧಿಪರ ಕಾರ್ಯಕ್ರಮವೇ ಸುವರ್ಣ ಗ್ರಾಮೋದಯ ಯೋಜನೆ.

ಈ ಯೋಜನೆಯಡಿ 3ನೇ ಹಂತದ ಸುವರ್ಣ ಗ್ರಾಮ ಯೋಜನೆಯನ್ನು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕ ಕಲ್ಲೋಳ ಗ್ರಾಮವು ಮುಖ್ಯವಾಗಿ ಕೃಷ್ಣಾ ನದಿ ದಡದಲ್ಲಿರುವ ಕಾರಣ ನೆರೆ ಹಾವಳಿಯಿಂದಾಗಿ ಪ್ರತಿ ವರ್ಷ ಗ್ರಾಮದ ಜನರು ಮೂಲಭೂತ ಸೌಲಭ್ಯಗಳ ವಂಚಿತರಾಗಿ ಸಾಕಷ್ಟು ಪರಿಪಾಡಲು ಪಡುತ್ತಿದ್ದರು. ಈ ಬಗ್ಗೆ ಗಮನ ಹರಿಸಿದ ಚಿಕ್ಕೋಡಿ ಸದಲಗಾ ಮತಕ್ಷೇತ್ರದ ಮಾನ್ಯ ಶಾಸಕರು ಸುವರ್ಣ ಗ್ರಾಮೋದಯ ಯೋಜನೆಯಡಿ ಈ ಪುಟ್ಟ ಊರನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಕೈಗೊಂಡರು. ಗ್ರಾಮವನ್ನು ಸಂಪೂರ್ಣ ಅಭಿವೃದ್ದಿಪಡಿಸಿದಲ್ಲಿ ಗ್ರಾಮವನ್ನು ನೆರೆಯಿಂದ ಸ್ಥಳಾಂತರಿಸುವ ಅವಶ್ಯಕತೆಯನ್ನು ಹೊಗಲಾಡಿಸಲಾಗುವ ಮೂಲ ಉದ್ದೇಶದೊಂದಿಗೆ ಯೋಜನೆಯಡಿ ಕಲ್ಲೋಳ ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ಗ್ರಾಮದ ಯೋಜನೆಯನ್ನು ಅನುಷ್ಠಾನವನ್ನು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್, ಲಿಮಿಟೆಡ್., ಚಿಕ್ಕೋಡಿ ವಿಭಾಗದಿಂದ ನಿರ್ವಹಿಸಲಾಗಿದೆ.

**ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಪುಟ್ಟ ಊರು ಕಲ್ಲೋಳ, ಕೃಷ್ಣ ನದಿಯ ನೆರೆಯ ಭೀತಿಯಿಂದ ಯಾವಾಗಲೂ ಸಂಕಷ್ಟಕ್ಕೆ ಒಳಗಾಗಿ ಗ್ರಾಮದ ಜನರು ಬವಣೆಗೊಳಗಾಗುತ್ತಿದ್ದರು. ಸುವರ್ಣ ಗ್ರಾಮೋದಯ ಅಭಿವೃದ್ಧಿ ಯೋಜನೆಯಿಂದ ಇಂತಹ ಸಮಸ್ಯೆಗಳೇ ಇಂದು ಕಾಣುತ್ತಿಲ್ಲ.**

ಈ ಗ್ರಾಮದ ಜನಸಂಖ್ಯೆ 4924 (2000ರ ಜನಗಣತಿ), 6.987 ಕಿ.ಮೀ ರಸ್ತೆ ಹೊಂದಿದ್ದು ಇದರಲ್ಲಿ ಸುವರ್ಣ ಗ್ರಾಮ ಯೋಜನೆ ಅಡಿಯಿಂದ 4.13 ಕಿ.ಮೀ ಕಾಂಕ್ರೀಟ್ ರಸ್ತೆಯನ್ನು ನಿರ್ಮಾಣ ಮಾಡಲಾಗಿದ್ದು ಬಾಕಿ ಉಳಿದ 2.875 ಕಿ.ಮೀ ಕಾಂಕ್ರೀಟ್ ರಸ್ತೆಯನ್ನು ಕರ್ನಾಟಕ ನೀರಾವರಿ ನಿಗಮ SCP/TSP ಯೋಜನೆಯಡಿ ನಿರ್ಮಾಣ ಮಾಡಿ ಒಟ್ಟಾರೆ ಗ್ರಾಮದ ಎಲ್ಲ ರಸ್ತೆಗಳು ಅಭಿವೃದ್ಧಿ ಹೊಂದಿರುತ್ತವೆ.





ಗ್ರಾಮದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಸಮುದಾಯ ಭವನ ಹಾಗೂ ಒಂದು ಅಂಗನವಾಡಿ ಕೇಂದ್ರದ ಕಟ್ಟಡವನ್ನು ನಿರ್ಮಿಸಲಾಗಿದೆ. ಇದಕ್ಕಾಗಿ ಸುವರ್ಣ ಗ್ರಾಮೋದಯ ಯೋಜನೆಯಡಿ ಒಟ್ಟು ರೂ.109.00 ಲಕ್ಷಗಳು ಮಂಜೂರಾಗಿದ್ದು ಸಂಪೂರ್ಣವಾಗಿ ಬಳಸಿಕೊಂಡು ಗ್ರಾಮವನ್ನು ಸರ್ವತೋಮುಖ ಅಭಿವೃದ್ಧಿಪಡಿಸಲಾಗಿದೆ.



ಈಗ ಕೃಷ್ಣಾ ನದಿಯ ನೆರೆ ಬಂದರು ಸಹ ಗ್ರಾಮದ ಜನತೆಗೆ ಯಾವದೇ ತೊಂದರೆಗಳು ಆಗಿರುವದಿಲ್ಲ. ಇದು ಸುವರ್ಣ ಗ್ರಾಮೋದಯ ಯೋಜನೆಯ ಅಭಿವೃದ್ಧಿಯ ಯಶೋಗಾಥೆ.

# ¸ÀªÀð UÁA¢üÃzÀiÀÄzÀ ¸ÉÃ¸ÁAwPÀvÀ¼ÀÄ

– ಪ್ರೊ। ಎ.ಎಚ್. ಮಾಸಾಪತಿ

ಗಾಂಧೀಜಿಯವರನ್ನು ಕುರಿತು; ಪ್ರಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ನೀಡಿರುವ ವಿವರಣೆಯು ಗಮನಾರ್ಹವಾಗಿದೆ. ವಿನೋಬಾ ಭಾವೆ, ಜಯಪ್ರಕಾಶ್ ನಾರಾಯಣ್, ನೆಲ್ಸನ್ ಮಂಡೇಲಾ, ಮಾರ್ಟಿನ್ ಲೂಥರ್ ಕಿಂಗ್, ಇತ್ಯಾದಿ ಅನೇಕ ಧುರೀಣರು; ಗಾಂಧೀಜಿಯವರ ಜೀವನ ಹಾಗೂ ಕೃತಿಗಳಿಂದ ಸ್ಫೂರ್ತಿ ಪಡೆದಿದ್ದಾರೆ. 1919 ರಿಂದ 1948ರವರೆಗೆ ಸುಮಾರು ಮೂವತ್ತು ವರ್ಷಗಳ ಅವಧಿಯಲ್ಲಿ; ತರುಣ ಭಾರತ, ನವಜೀವನ ಮತ್ತು ಹರಿಜನ ಪತ್ರಿಕೆಗಳು, ಗಾಂಧೀಜಿಯವರ ಮಹತ್ವದ ಲೇಖನಗಳನ್ನು ಪ್ರಕಟಿಸಿವೆ. ಪ್ರೊ। ಜೆ.ಜೆ. ಅಂಜಾರಿಯಾ ಅಭಿಪ್ರಾಯದ ಪ್ರಕಾರ, ಗಾಂಧೀಜಿಯವರ ಸರಳ, ವಾಸ್ತವಿಕ ಹಾಗೂ ಕಲ್ಯಾಣಕಾರಕ ವಿಚಾರಧಾರೆಗೆ, "ಗಾಂಧೀ ಅರ್ಥಶಾಸ್ತ್ರ" ಎಂದು, ನಾಮಕರಣ ಮಾಡಲಾಗಿದೆ.

ಅಭಿವೃದ್ಧಿ ಪರಿಕಲ್ಪನೆಯನ್ನು ಉನ್ನತ ಮಟ್ಟದಿಂದ ತಳ ಮಟ್ಟಕ್ಕೆ ಒತ್ತಾಯಪೂರ್ವಕವಾಗಿ ಹೇರುವ ಬದಲು ಅದನ್ನು ತಳಹಂತದಿಂದ ಪ್ರಾರಂಭಿಸಬೇಕು.



ಗಾಂಧೀಜಿಯವರ ಸೂಕ್ಷ್ಮವಾದ ಮನಸ್ಸಿನ ಮೇಲೆ ಕೆಲವು ಗ್ರಂಥಗಳು ತೀಕ್ಷ್ಣವಾದ ಪ್ರಭಾವ ಬೀರಿವೆ. ಲಿಯೋ ಟಾಲ್‌ಸ್ಟಾಯ್ ಕೃತಿ, 'ದೇವರ ರಾಜ್ಯ ನಿನ್ನಲ್ಲಿಯೇ ಇದೆ',

ನಿರ್ದೇಶಕರು
ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ,
ಕೆ.ಎಚ್.ಬಿ. ರೋಡ್, ಸುಲ್ತಾನ್‌ಪಾಳ್ಯ, ಬೆಂಗಳೂರು–32

ಜಾನ್‌ರಸ್ಕಿನ್ಸ್‌ರ, 'ಅಂತ್ಯದ ವರೆಗೆ', ಎಡ್ವಿನ್ ಅರ್ನಾಲ್ಡ್‌ರ, 'ಬುದ್ಧನ' ಜೀವನ ಚರಿತ್ರೆ' ಹಾಗೂ 'ದಿವ್ಯ ಗೀತೆ', ಮಹಾಭಾರತ, ಭಾಗವತ, ಭಗವದ್ಗೀತೆ, ಉಪನಿಷತ್ತು, ಗುರು ನಾನಕ್, ಸಂತ ಸಬೀರ್ ಇತ್ಯಾದಿ ಗ್ರಂಥಗಳಿಂದ, ಅವರು ಪ್ರಭಾವಿತರಾಗಿದ್ದರು. ದಕ್ಷಿಣ ಆಫ್ರಿಕಾದ ಬಂದೀಖಾನೆಯು ಗಾಂಧೀಜಿಯವರಿಗೆ ಅವಿಸ್ಮರಣೀಯವಾದ ಜೀವನ ಪಾಠಗಳನ್ನು ಕಲಿಸಿದೆ. ಆಗಿನ ಪ್ರಧಾನಿ ಜನರಲ್ ಸ್ಮಟ್ಸ್ ಗಾಂಧೀಜಿಯವರ ನಡೆ–ನುಡಿಗಳಿಂದ ಪ್ರಭಾವಿತರಾಗಿದ್ದರು. ಎಲ್ಲೆಡೆಗೆ ಭಯಾನಕ ಕತ್ತಲು ತುಂಬಿದ ಭಾರತದಲ್ಲಿ ಅವರು ವಿನೂತ ಬೆಳಕು ಕಂಡರು. ಕೋಟ್ಯಾಂತರ ಭಾರತೀಯರ ಭವಿಷ್ಯ ರೂಪಿಸಲು ಮತ್ತು ಭಾರತದ ಸ್ವಾತಂತ್ರ್ಯ / ಸ್ವರಾಜ್ಯ ಸಾಧನೆಗಾಗಿ, ಆತ್ಮಶಕ್ತಿಯು; ಬ್ರಿಟಿಷ್ ಸಾಮ್ರಾಜ್ಯದ ಆಧಾರ ಶಿಲೆಯನ್ನು ಶಿಥಿಲಗೊಳಿಸಿದೆ.

ಮಾನವ ಜನಾಂಗದ ನಾಗರಿಕತೆಯ ಇತಿಹಾಸದಲ್ಲಿ, ಗಾಂಧೀ ಸಾಹಿತ್ಯ ಮತ್ತು ತತ್ವಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಅವರು ಕರ್ಮ ಹಾಗೂ ಕರ್ಮದಲ್ಲಿ ಸಾಕಾರಗೊಳ್ಳಬೇಕೆಂದು; ಅವರು ನಿರೂಪಿಸಿದ್ದಾರೆ. ವ್ಯಾಪಕವಾದ ಲೋಕಾನುಭವ ಮತ್ತು ಅಮೌಲ್ಯವಾದ ಜೀವನಾನುಭವಗಳಿಂದ; ಅವರು ಸ್ವಾಭಾವಿಕ ಅರ್ಥಶಾಸ್ತ್ರಜ್ಞರಾಗಿ, 'ಗಾಂಧೀ ಅರ್ಥಶಾಸ್ತ್ರದ ಪಿತಾಮಹ' ಎಂಬ ಪ್ರಖ್ಯಾತಿಗೆ ಪಾತ್ರರಾಗಿದ್ದಾರೆ. ಅವರ ಸರ್ವೋದಯ ಸಿದ್ಧಾಂತದಿಂದ ವಿಶ್ವದಾದ್ಯಂತ ಅನೇಕ ಪ್ರಜ್ಞಾವಂತರು ಪ್ರಭಾವಿತರಾಗಿದ್ದಾರೆ.

## ಸ್ವರಾಜ್ಯ ಪರಿಕಲ್ಪನೆ

'ಸ್ವರಾಜ್ಯ' ಪರಿಕಲ್ಪನೆಯ ಕೆಲವು ಪ್ರಕಾರದ ಅರ್ಥಗಳನ್ನು 'ನವಜೀವನ' ಪತ್ರಿಕೆಯಲ್ಲಿ [ದಿ॥ 4–5–1924ರಂದು] ಗಾಂಧೀಜಿಯವರು ವಿವರಿಸಿದ್ದಾರೆ. ಭಾರತದಲ್ಲಿ ಹಸಿವೆಯಿಂದ ನರಳುತ್ತಿರುವ ಜನರನ್ನು 'ಸ್ವರಾಜ್ಯ' ಅಂದರೆ ಏನೆಂದು ಕೇಳಿದಾಗ, ಹಸಿದವರ ಪಾಲಿಗೆ ಅನ್ನವು ಮಾತ್ರ ದೇವರು; ಅದುವೇ 'ಸ್ವರಾಜ್ಯ'. ಉದ್ಯೋಗರಹಿತ ಕೈಗಳಿಗೆ ಯಾವುದಾದರೊಂದು ಕೆಲಸ ನೀಡಿ, ಅದರ ಮುಖಾಂತರ ಹಸಿವಿನ ಬೆಂಕಿಯನ್ನು ಸ್ವಲ್ಪ ಮಟ್ಟಿಗಾದರೂ ಶಮನಗೊಳಿಸಿದರೆ ಅದು ಸ್ವರಾಜ್ಯ ವೆನಿಸುತ್ತದೆ. ಪ್ರತಿಯೊಬ್ಬರ ಸ್ವಾತಂತ್ರ್ಯ ರಕ್ಷಣೆ ಮತ್ತು ದಾರಿದ್ರ್ಯ ನಿರ್ಮೂಲನೆಯು ಸ್ವರಾಜ್ಯದ ಜೀವಾಳವಾಗಿದೆ. ಗಾಂಧೀಜಿಯವರ ಸ್ವರಾಜ್ಯ ಪರಿಕಲ್ಪನೆಯನ್ನು ಡಿ.ವಿ.ಜಿ. ಅವರು ಕಾವ್ಯಮಯವಾಗಿ ನಿರೂಪಿಸಿದ್ದಾರೆ. ಅವರ ದೃಷ್ಟಿಯಲ್ಲಿ, ಸ್ವರಾಜ್ಯವೆಂದರೆ; ಆತ್ಮಶಿಕ್ಷಣ, ಆತ್ಮ ಸಂಸ್ಕರಣ ಹಾಗೂ ಆತ್ಮ ಪರಿಷ್ಕರಣ, ಪ್ರತಿಯೊಬ್ಬ ವ್ಯಕ್ತಿಯ ಆತ್ಮ ಸಂಸ್ಕರಣವನ್ನು, ಸಮಗ್ರ ದೇಶದ ಆತ್ಮ ಸಂಸ್ಕರಣವೆಂದು ಪರಿಗಣಿಸಲಾಗಿದೆ.

ಪರಕೀಯ ಪ್ರಭುತ್ವದ ಸಂಕೋಲೆಯಿಂದ ಮುಕ್ತವಾದ ನಂತರ ಇತರ ಸಂಕೀರ್ಣ ಸಮಸ್ಯೆಗಳ ಸರಪಳಿಗಳಿಂದ ಸಂಪೂರ್ಣವಾಗಿ ಬಿಡುಗಡೆಹೊಂದುವ ಪ್ರಕ್ರಿಯೆಗೆ 'ಸಮಗ್ರ ಸ್ವಾತಂತ್ರ್ಯ' ಎಂದು ಕರೆಯಲಾಗಿದೆ. ಸಂಪೂರ್ಣ ಸ್ವರಾಜ್ಯ ಸಾಧನೆಗಾಗಿ ಜನರನ್ನು ಅರ್ಹಗೊಳಿಸುವ ಅಗತ್ಯವನ್ನು ಗಾಂಧೀಜಿಯವರು ಅನೇಕ ಸಲ ಸ್ಪಷ್ಟವಾಗಿ ವಿವರಿಸಿದ್ದಾರೆ. ಸ್ವರಾಜ್ಯ ಸಂಪಾದನೆ ಮತ್ತು ಸಂರಕ್ಷಣೆಯು ಭಾರತೀಯರ ಪರಮ ಕರ್ತವ್ಯವಾಗಿದೆ. ನಿರಂತರ ಪರಿಶ್ರಮ, ತ್ಯಾಗ ಮತ್ತು ಬಲಿದಾನದಿಂದ ಇಂತಹ ಮಹತ್ವದ ಧ್ಯೇಯವನ್ನು ಸಾಧಿಸಬೇಕಾಗುತ್ತದೆ. ಸ್ವರಾಜ್ಯವನ್ನು ಯಾರಿಂದಲೂ ಕಾಣಿಕೆ ಅಥವಾ ಬಳುವಳಿಯ ರೂಪದಲ್ಲಿ ಪಡೆಯಲು ಸಾಧ್ಯವಿಲ್ಲ. ಅಸಹಕಾರ ಆಂದೋಲನದ ಕಾಲದಲ್ಲಿ [1920 ರಿಂದ 1922], ಗಾಂಧೀಜಿಯವರು ಸ್ವರಾಜ್ಯ ಸಂಪಾದನೆಗಾಗಿ ಅಗತ್ಯವಾದ ಅರ್ಹತೆಯ ಬೆಳವಣಿಗೆಯನ್ನು ಕುರಿತು ಹೆಚ್ಚಾಗಿ ಸಮರ್ಥಿಸಿದ್ದಾರೆ.

ದೇಶದ ಎದುರಿಗೆ ಪ್ರಸ್ತಾಪಿಸಿದಂತಹ ಹದಿನೆಂಟು ಕಾರ್ಯಕ್ರಮಗಳಲ್ಲಿ, ಮಹಿಳೆಯರ ಅಭಿವೃದ್ಧಿಗೆ ಅಗತ್ಯವಾದ ಅಂಶಗಳನ್ನು ಸ್ಪಷ್ಟಪಡಿಸಲಾಗಿದೆ. ಸ್ವರಾಜ್ಯದ ಪರಿಕಲ್ಪನೆಯು ಮಹಿಳಾ ಸಮಾನತೆ, ಶಿಕ್ಷಣ, ವ್ಯಕ್ತಿತ್ವ ವಿಕಾಸ, ಸ್ಥಾನ–ಮಾನ ಸುಧಾರಣೆಯನ್ನು

ಒಳಗೊಳ್ಳುತ್ತದೆ. ಗಾಂಧೀಜಿಯವರ ಸ್ವರಾಜ್ಯ ಪರಿಕಲ್ಪನೆಯಲ್ಲಿ ಮಹಿಳೆಯರ ಸಮಸ್ಯೆಗಳಿಗೆ ಪ್ರಾಧಾನ್ಯತೆ ನೀಡಲಾಗಿದೆ. ಶತಮಾನ ಗಳಿಂದಲೂ ಆಳವಾಗಿ ಬೇರೂರಿದ ಮಹಿಳೆಯರ ಬಗೆಗಿನ ಆಪ-ಕಲ್ಪನೆ / ದೋಷಪೂರ್ಣ ತಿಳುವಳಿಕೆಯನ್ನು ನಿವಾರಿಸಲು ಹಾಗೂ ಸ್ವರಾಜ್ಯ ಸಾಧನೆಯಲ್ಲಿ, ಮಹಿಳೆಯರ ಸಹಭಾಗಿತ್ವ ಹೆಚ್ಚಿಸಲು ಪ್ರೋತ್ಸಾಹನೆ ನೀಡಲಾಗಿದೆ.

ತರುಣ ಭಾರತ ಮತ್ತು ಹರಿಜನ ಪತ್ರಿಕೆಗಳಲ್ಲಿ, ಚಿಂತನಶೀಲ ಲೇಖನ/ಸಂದರ್ಶನಗಳ ಮೂಲಕ ಗಾಂಧೀಜಿಯವರು ಗ್ರಾಮ-ಸ್ವರಾಜ್ಯದ ಪರಿಕಲ್ಪನೆಯನ್ನು ಸರಳ ಹಾಗೂ ಸ್ಪಷ್ಟವಾದ ಶಬ್ದಗಳಲ್ಲಿ ನಿರೂಪಿಸಿದ್ದಾರೆ. 1942ರ ಜುಲೈ 18ರಂದು ಗಾಂಧೀಜಿಯವರು ವ್ಯಕ್ತಪಡಿಸಿದ ದೃಷ್ಟಿಕೋನಗಳನ್ನು ಐತಿಹಾಸಿಕ ದಾಖಲೆಗಳೆಂದು ಪರಿಗಣಿಸಲಾಗಿದೆ. ಗ್ರಾಮ ಸ್ವರಾಜ್ಯದ ಅರ್ಥ, ಪ್ರಧಾನ ಕರ್ತವ್ಯ, ಮೂಲ ಶಿಕ್ಷಣದ ಮಹತ್ವ ಪಂಚಾಯತ್ ಸದಸ್ಯರ ಅಧಿಕಾರ, ಹೊಣೆಗಾರಿಕೆ ಹಾಗೂ ಗ್ರಾಮಪರಿಪಾಲನೆ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ. ಆರಂಭದಲ್ಲಿ ಸಫಲತೆಯು ಅಸ್ಪಷ್ಟವಾಗಿ ದೂರದ ಬೆಟ್ಟದಂತೆ ಮಸಕು-ಮಸುಕಾಗಿ ಗೋಚರಿಸುತ್ತದೆ. ಕ್ರಮೇಣವಾಗಿ, ಗ್ರಾಮ ಸ್ವರಾಜ್ಯದ ಪರಿಕಲ್ಪನೆಯು ಸ್ಪಷ್ಟವಾಗಿ ಕಾಣುತ್ತದೆ. ಗ್ರಾಮೀಣ ಜೀವನದಲ್ಲಿ ನೈಜವಾದ ಪ್ರಜಾಪ್ರಭುತ್ವದ ದರ್ಶನವಾಗಬೇಕು. ಗ್ರಾಮಗಳನ್ನು ಸರ್ವಸ್ವವೆಂದು ಭಾವಿಸಿ ಸಮರ್ಪಣಾಭಾವನೆಯಿಂದ ಕಾರ್ಯನಿರ್ವಹಿಸಿದರೆ ಅಪೇಕ್ಷಿತ ಧ್ಯೇಯಗಳನ್ನು ಸಾಧಿಸಬಹುದಾಗಿದೆ.

## ಅಭಿವೃದ್ಧಿಯ ತತ್ವಜ್ಞಾನ

ಭಾರತದ ಲಕ್ಷಾಂತರ ಗ್ರಾಮಗಳಲ್ಲಿ, ವಿಕೇಂದ್ರೀಕರಣದ ದೃಷ್ಟಿಕೋನಗಳು ಜೀವಂತ/ಜ್ವಲಂತನವಾಗಬೇಕು. ಗಾಂಧೀ ಆರ್ಥಿಕ/ಸಾಮಾಜಿಕ ವಿಚಾರ ಧಾರೆಯು ಮರುಜನ್ಮಪಡೆದು ಸಶಕ್ತೀಕರಣದ ಮಾರ್ಗದಲ್ಲಿ ಗತಿಶೀಲವಾಗಬೇಕು. ಅಭಿವೃದ್ಧಿಯ ಪರಿಕಲ್ಪನೆಯನ್ನು ಉನ್ನತ ಮಟ್ಟದಿಂದ ತಳಮಟ್ಟಕ್ಕೆ ಒತ್ತಾಯ ಪೂರ್ವಕವಾಗಿ ಹೇರುವ ಬದಲು ಅದನ್ನು ತಳಹಂತದಿಂದ ಆರಂಭಿಸಬೇಕು. ಗ್ರಾಮಗಳು ಪ್ರತಿಯೊಂದು ವಿಷಯ/ವಿವಾದಾಂಶಗಳ ಬಗೆಗಿನ ವಿಚಾರ-ವಿನಿಮಯದ ಕೇಂದ್ರಗಳಾಗಬೇಕು. ಗ್ರಾಮೀಣ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಜನರಿಂದ ಜನರಿಗಾಗಿ ಮತ್ತು ಜನರ ಅಭಿವೃದ್ಧಿಯನ್ನು ಕುರಿತು; ಚನ್ನಾಗಿ ಯೋಚಿಸ ಬೇಕಾಗುತ್ತದೆ. ರಾಷ್ಟ್ರದ ರಕ್ಷಣೆ ಹಾಗೂ ಅಭಿವೃದ್ಧಿಯನ್ನು ಹೊಣೆಗಾರಿಕೆ ಹೊಂದಿದ ಸರ್ಕಾರಗಳು ಮತ್ತು ಪ್ರಜ್ಞಾವಂತ ನಾಗರಿಕರ ಪರಮ ಕರ್ತವ್ಯವೆಂದು ಪರಿಗಣಿಸಬೇಕಾಗುತ್ತದೆ.

ಮಾನವಾಭಿವೃದ್ಧಿಯ ಶ್ರೇಷ್ಠವಾದ ವಿಚಾರಗಳು ಜಗತ್ತಿನ ಯಾವದೇ ಭಾಗದಿಂದ ಬಂದರೂ ಸಹ ಅಭಿವೃದ್ಧಿಶೀಲ ರಾಷ್ಟ್ರಗಳು ಸ್ವೀಕರಿಸುವಂತಹ ಸಾಮಾಜಿಕ ಪರಿಸರವನ್ನು ನಿರ್ಮಿಸಬೇಕು. 'ರಾಷ್ಟ್ರವು ನಮಗೇನು ಮಾಡಿದೆ ಎಂದು ಕೇಳುವುದಕ್ಕಿಂತಲೂ ಹೆಚ್ಚಾಗಿ ರಾಷ್ಟ್ರಕ್ಕೆ ನಾವೇನು ಮಾಡಲು ಸಾಧ್ಯವೆಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕೆಂದು' ಅಮೇರಿಕಾದ ಜನಪ್ರಿಯ ಮಾಜೀ ಅಧ್ಯಕ್ಷರಾಗಿದ್ದ ಜೆ.ಎಫ್. ಕೆನಡಿ ಎಚ್ಚರಿಕೆ ನೀಡಿದ್ದಾರೆ. ಇಂತಹ ನುಡಿಗಳು ನಾಗರೀಕ ಸಮಾಜದ ಕರ್ತವ್ಯ ಪ್ರಜ್ಞೆಯನ್ನು ಜಾಗ್ರತಗೊಳಿಸುತ್ತವೆ.

ಸಾಬರಮತಿ ಆಶ್ರಮದ ಒಂದು ಗೋಡೆಯ ಮೇಲೆ ಗಾಂಧೀಜಿ ರೂಪಿಸಿದ 'ಜೀವನ ಚಕ್ರ' ಎಂಬ ಚಿತ್ರದಲ್ಲಿ ಸ್ವರಾಜ್ಯದ ಪರಿಕಲ್ಪನೆಯು ಬಿಂಬಿತವಾಗಿದೆ. ಮಾನವೀಯ ಮೌಲ್ಯ ಹಾಗೂ ರಾಷ್ಟ್ರೀಯ ಮಹತ್ವದ ಕಾರ್ಯಕ್ರಮಗಳನ್ನು ಜೀವನ ಚಕ್ರವು ಪ್ರತಿನಿಧಿಸುತ್ತದೆ. ಅದರ ನಾಲ್ಕು ಭಾಗಗಳಲ್ಲಿ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ಅನುಕ್ರಮವಾಗಿ ಪ್ರಥಮ ಹಾಗೂ ಚತುರ್ಥ ಸ್ಥಾನದಲ್ಲಿವೆ. ಸಮಾಜಶಾಸ್ತ್ರದಲ್ಲಿ ಐದು ವಿಭಾಗಗಳನ್ನು ಗುರುತಿಸಲಾಗಿದೆ.

1. ಪಂಚಾಯತಿ ರಾಜ್ಯ
2. ಕೋಮು ಸೌಹಾರ್ದತೆ
3. ಅಸ್ಪೃಶ್ಯತಾ ನಿವಾರಣೆ

4. ಮಹಿಳಾ ವಿಮೋಚನೆ

5. ಕುಷ್ಠರೋಗ ನಿರ್ಮೂಲನೆ

ಗಾಂಧೀಜಿಯವರು ಸಮಾಜಶಾಸ್ತ್ರವನ್ನು 'ಪ್ರೇಮಶಾಸ್ತ್ರ' ಎಂದು, ಕರೆದಿದ್ದಾರೆ. ಅವರ ಪ್ರೇಮದ ಪರಿಕಲ್ಪನೆಯು ದೈವೀ ಪ್ರೇರಣೆ ಮತ್ತು ಉನ್ನತವಾದ ಮಾನವೀಯ ಮೌಲ್ಯಗಳಿಂದ ಉದ್ಭವಿಸಿದೆ. ಇಂತಹ ಶ್ರೇಷ್ಠವಾದ ವಿಚಾರಗಳನ್ನು ಅನುಷ್ಠಾನಗೊಳಿಸಲು ಸರ್ವಸಿದ್ಧತೆಗಳು ಅಗತ್ಯವಾಗಿವೆ.

ಹಲವಾರು ಪ್ರಖ್ಯಾತ ಗಾಂಧೀವಾದಿಗಳು ಅಭಿವೃದ್ಧಿ ತತ್ವಜ್ಞಾನದ ವಿಶ್ಲೇಷಣೆ ಹಾಗೂ ಅರ್ಥವಿವರಣೆಯನ್ನು ಮಾಡಿದ್ದಾರೆ. ಅವರ ಸಾಮಾಜಿಕ/ನೈತಿಕ ಮೌಲ್ಯಗಳು ಸಮಕಾಲೀನ ಜಗತ್ತಿನ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಲು ಮಾರ್ಗದರ್ಶನ ಮಾಡುವ ಸಾಮರ್ಥ್ಯವನ್ನು ಹೊಂದಿವೆ. ಆದರೆ ಜನಸಂಖ್ಯಾನಿಯಂತ್ರಣ ಯಾಂತ್ರೀ ಕರಣ ಬೃಹದ್ ಕೈಗಾರಿಕಾ ಬೆಳವಣಿಗೆ, ವೈಜ್ಞಾನಿಕ/ತಾಂತ್ರಿಕ ಮುನ್ನಡೆ ಇತ್ಯಾದಿ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಸಹ ಮಾನವೀಯ ಮೌಲ್ಯಗಳು ಗಾಂಧೀ ಅರ್ಥಶಾಸ್ತ್ರದಲ್ಲಿ ಪ್ರಥಮ ಮತ್ತು ಹಣಕಾಸು ದ್ವಿತೀಯ ಸ್ಥಾನ ಹೊಂದಿದೆ. ಆದರೆ ವಿದೇಶಿ ವಸ್ತು, ವ್ಯಕ್ತಿ, ಹಣಕಾಸು, ಜೀವನ ಶೈಲಿ, ಭೋಗ/ಭಾಗ್ಯದ ವ್ಯಾಮೋಹದಲ್ಲಿ ಬಂಧಿತರಾದ ವ್ಯಕ್ತಿಗಳಿಗೆ, ಸ್ವರಾಜ್ಯದ ಪರಿಕಲ್ಪನೆಯು ಹಾಸ್ಯಾಸ್ಪದವೆಂಬಂತೆ ಕಾಣುತ್ತದೆ.

ದಾರಿದ್ರ್ಯ ಮತ್ತು ಸಮೃದ್ಧಿಯ ಬಗೆಗಿನ ಸಮಸ್ಯೆಗಳು ತದ್ವಿರುದ್ಧವಾಗಿವೆ. ದಾರಿದ್ರ್ಯ ಗ್ರಸ್ತ ದೇಶಗಳು ಹಸಿವೆ, ಬಾಯಾರಿಕೆ, ಅನಾರೋಗ್ಯ, ಅನಕ್ಷರತೆ, ನಿರುದ್ಯೋಗ ಮೊದಲಾದ ಸಮಸ್ಯೆಗಳಿಂದ ಚಿಂತಾಕ್ರಾಂತವಾಗಿದ್ದರೆ, ಶ್ರೀಮಂತ ರಾಷ್ಟ್ರಗಳು ತಮ್ಮ ಸಮೃದ್ಧಿಗೆ ಉಂಟಾಗುವ ಗಂಡಾಂತರದಿಂದ ಭಯಗ್ರಸ್ತವಾಗಿವೆ. ಇಂದಿನ ಮತ್ತು ಮುಂದಿನ ಜನಾಂಗಗಳು ಗಾಂಧೀಜಿಯವರ ಶ್ರೇಷ್ಠ ಕೃತಿ, 'ಹಿಂದ್ ಸ್ವರಾಜ್', ಒಳಗೊಂಡಂತೆ ಹಲವಾರು ಮಹತ್ವದ ಗ್ರಂಥಗಳ ಅಧ್ಯಯನ ಹಾಗೂ ಚಿಂತನೆಯಿಂದ ನಿರಂತರ ಸ್ಫೂರ್ತಿ ಪಡೆಯಬೇಕು.

## ಯೋಜನಾಬದ್ಧ ಅಭಿವೃದ್ಧಿ

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಯೋಜನೆಗಳ ಪ್ರಧಾನ ಧ್ಯೇಯೋದ್ದೇಶಗಳು, ಜನರ ಜೀವನ ಮಟ್ಟದ ಹೆಚ್ಚಳ/ಸುಧಾರಣೆ ಮತ್ತು ಸಾಮಾಜಿಕ/ಆರ್ಥಿಕ ನ್ಯಾಯದ ಆದರ್ಶಗಳಿಂದ ಪ್ರೇರಿತವಾಗಿವೆ. ಯೋಜನೆಗಳ ರಚನೆ ಹಾಗೂ ಅನುಷ್ಠಾನದ ವಿವಿಧ ಹಂತದ ಪ್ರಕ್ರಿಯೆಗಳಲ್ಲಿ ಸೂಕ್ತವಾದ ಮೌಲ್ಯಾಧಾರಿತ ಸಿಬ್ಬಂದಿಯನ್ನು ಆಯ್ಕೆ ಮಾಡಬೇಕು. ಪ್ರಥಮ ಪಂಚವಾರ್ಷಿಕ ಯೋಜನೆಯ ಕಾಲದಿಂದ [1951–56] ಯೋಜನೆಯ ತತ್ವಜ್ಞಾನ ಹಾಗೂ ಗುಣಮಟ್ಟದ ತರಬೇತಿಯ ಬಗೆಗೆ ಒತ್ತುನೀಡಲಾಗಿದೆ. ಸಮಗ್ರವಾದ ಅಧಿಕಾರಶಾಹಿ ವ್ಯವಸ್ಥೆಯನ್ನು ಯೋಗ್ಯವಾದ ಮಾರ್ಗದಲ್ಲಿ ಮುನ್ನಡೆಸಲು ಉನ್ನತಮಟ್ಟದಲ್ಲಿ ಶಿಸ್ತು, ಸಂಯಮ, ದಕ್ಷತೆ ಮತ್ತು ಬೌದ್ಧಿಕ ಪ್ರಾಮಾಣಿಕತೆಯನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಆಧುನಿಕ ಭಾರತದ ಯೋಜನಾಬದ್ಧ ಅಭಿವೃದ್ಧಿಯನ್ನು ಅರ್ಥಪೂರ್ಣ ಗೊಳಿಸಲು ಯೋಜನಾ ಆಯೋಗದ ಕಾರ್ಯ ವೈಖರಿಯಲ್ಲಿ ರಚನಾತ್ಮಕ ಬದಲಾವಣೆಗಳಾಗಬೇಕು. ಆದರಲ್ಲಿ ಆಳವಾಗಿ ಬೇರೂರಿದಂತಹ ಪಟ್ಟಭದ್ರ ಹಿತಾಸಕ್ತಿಗಳನ್ನು ಸೂಕ್ತವಾಗಿ ನಿಯಂತ್ರಿಸಬೇಕು. ಶಿಸ್ತು ಹಾಗೂ ಅಭಿವೃದ್ಧಿಯ ವಿಚಾರಗಳನ್ನು ಪರಿಣಾಮ ಕಾರಿಯಾಗಿ ಬಿಂಬಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳ ಮೂಲಕ ದಾರಿದ್ರ್ಯ ನಿರ್ಮೂಲನೆಯ ಕಾರ್ಯಕ್ರಮಗಳನ್ನು ಮುಂದು ವರಿಸಲಾಗಿದ್ದರೂ ಸಹ ಅಪೇಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗಿಲ್ಲ.

ದಾರಿದ್ರ್ಯ ನಿರ್ಮೂಲನೆಯ ವಿವಿಧ ಕಾರ್ಯ ಕ್ರಮಗಳಲ್ಲಿ ಸಾಕಷ್ಟು ಹಣದ ಹೂಡಿಕೆ ಆಗಿದ್ದರೂ ಸಹ ನಿರೀಕ್ಷಿತವಾದ ಪರಿಣಾಮಗಳು ಪ್ರಾಪ್ತವಾಗಿಲ್ಲ. 1973–74ರಲ್ಲಿ ಶೇಕಡಾ 56.4 ರಿಂದ 1993–94ರಲ್ಲಿ ದಾರಿದ್ರ್ಯದ ಪ್ರಮಾಣವು 32–27ಕ್ಕೆ ಇಳಿಕೆ ಆಗಿದೆಯೆಂದು

ವಿವರಿಸಲಾಗಿದ್ದರೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಬಡವರ ಸಂಖ್ಯೆಯು ಕಡಿಮೆ ಆಗಿಲ್ಲ. ಇಂತಹ ವಿಫಲತೆಯ ಪ್ರಧಾನ ಕಾರಣಗಳನ್ನು ಕಂಡು ಹಿಡಿಯಲಾಗಿದೆ.

1. ಕಾರ್ಯಕ್ರಮಗಳಿಗಾಗಿ ನಿಗದಿತ ಹಣಕಾಸಿನ ದುರ್ಬಳಕೆ ಅಥವಾ ನಿರ್ಬಳಕೆ
2. ದೋಷಪೂರ್ಣವಾದ ಲೆಕ್ಕಪತ್ರ

ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಂದ ಶ್ರೇಷ್ಠವಾದ ಫಲಿತಾಂಶ ಪಡೆಯಲು ಆಯವ್ಯಯ ನಿರೂಪಣೆ/ ವಿವರಣೆ ಹಾಗೂ ಯೋಗ್ಯವಾದ ಲೆಕ್ಕಪತ್ರ ಇಡುವಿಕೆಯು ಸುಧಾರಿತ ನಿಯಮಗಳಿಗೆ ಅನುಸಾರವಾಗಿ, ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಮರು ಪರಿಶೀಲನೆಗೆ ಗುರಿಪಡಿಸಬೇಕು. ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಗಳ 'ಸಾಧನಾ ವಿಶ್ಲೇಷಣೆ' ಗಾಗಿ ಬಳಕೆ ಮಾಡುವಂತಹ ಇತರ ಹೊಸ ಲೆಕ್ಕ ಪತ್ರ ತಂತ್ರಗಳು

1. ಸೂಕ್ತವಾದ ಮೇಲುಸ್ತುವಾರಿ
2. ನಿರ್ವಹಣಾ ತಂತ್ರ ಮತ್ತು ಸಾಧನೆಯ ತಪಾಸಣೆ

ಅಧಿಕ ಕಾರ್ಯದಕ್ಷತೆ, ಮಿತವ್ಯಯತೆ ಹಾಗೂ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಮುನ್ನಡೆಸಲು, ಅನ್ವಯಿಸುವಂತಹ ಮೇಲುಸ್ತುವಾರಿ ಮತ್ತು ನಿರ್ವಹಣಾ ತಂತ್ರದಲ್ಲಿ ಯೋಜನೆ ಕಾರ್ಯಾಚರಣೆ ಹಾಗೂ ನಿಯಂತ್ರಣವು ಒಳಗೊಂಡಿರುತ್ತದೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಹೊಣೆಗಾರಿಕೆಯ ವ್ಯಾಪ್ತಿಯು ಸಮಗ್ರವಾದ ಗ್ರಾಮೀಣ ಜೀವನದ ವೈವಿಧ್ಯತೆಯನ್ನು ಆವರಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ತ್ವರಿತಗತಿಯ ಸಾಮಾಜಿಕ/ಆರ್ಥಿಕ ಬದಲಾವಣೆಗಾಗಿ ಗ್ರಾಮೀಣ ಬಡಜನತೆಯ ಜೀವನದ ಗುಣಮಟ್ಟ ಸುಧಾರಣೆ ಹಾಗೂ ಅವರ ಶಾಶ್ವತವಾದ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲಾಗುತ್ತದೆ. ಸ್ವರ್ಣ ಜಯಂತಿ ಗ್ರಾಮ್ ಸ್ವರೋಜಗಾರ್ ಯೋಜನೆ [ಎಸ್.ಜಿ.ಎಸ್.ವೈ] ಮತ್ತು ಜವಾಹರ್ ಗ್ರಾಮ ಸಮೃದ್ಧಿ ಯೋಜನೆ [ಜೆ.ಜಿ.ಎಸ್.ವೈ] ಇತ್ಯಾದಿ ಕಾರ್ಯಕ್ರಮಗಳ ಫಲಿತಾಂಶದಿಂದ ಉಪಯುಕ್ತವಾದ ಪಾಠಗಳನ್ನು ಕಲಿಯಬೇಕು.

## ಗ್ರಾಮೀಣ ಅಭ್ಯುದಯ

ಕಳೆದ ಆರು ದಶಕಗಳಲ್ಲಿ ಅನೇಕ ತಜ್ಞರು ಆರ್ಥಿಕ/ಸಾಮಾಜಿಕ ವಿದ್ವಾಂಸರು ಮತ್ತು ವೃತ್ತಿಪರ ಅರ್ಥಶಾಸ್ತ್ರಜ್ಞರು, ಗ್ರಾಮೀಣ ಅರ್ಥವ್ಯವಸ್ಥೆಯ ವೈವಿಧ್ಯಮಯ ಸಮಸ್ಯೆಗಳನ್ನು ಪ್ರಾಸ್ತಾಪಿಸುವುದರ ಜೊತೆಗೆ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಪರಿಹಾರ ಮಾರ್ಗವನ್ನು ಸಹ ಸ್ಪಷ್ಟವಾಗಿ ಸೂಚಿಸಿದ್ದಾರೆ. ಮಹಾತ್ಮಾ ಗಾಂಧೀಜಿಯರು ನಮ್ಮೊಂದಿಗೆ 21ನೇ ಶತಮಾನದಲ್ಲಿ ಸ್ಥೂಲವಾದ ರೂಪದಲ್ಲಿ ಇರದಿದ್ದರೂ ಸಹ ಅವರು ಸೂಕ್ಷ್ಮರೂಪದಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ. ಜಾತಿ /ಧರ್ಮಾಂಧರು ಗಾಂಧೀಜಿಯವರ ಸ್ಥೂಲರೂಪದ ಹೃದಯಕ್ಕೆ ಗುಂಡು ತಗಲಿಸಿದ್ದಾರೆ. ಆದರೆ ಅವರ ಜೀವನ ಸಾಧನೆ ಹಾಗೂ ಸಂದೇಶಗಳು ಮರಣಾತೀತ/ ಶಾಶ್ವತವಾಗಿವೆ. ಅವರ ಮಾತು ಮತ್ತು ಕೃತಿಗಳಲ್ಲಿ ಸಾಮರಸ್ಯವಿತ್ತು. ಅವರ ಸಾಮಾಜಿಕ ಕಾರ್ಯಗಳು ವೃತ್ತಿಪ್ರೇರಿತವಾಗಿರದೇ ಸೇವಾ ಮನೋಧರ್ಮದಿಂದ ಉದ್ಭವಿಸಿವೆ. ಭಾರತದ ಸರ್ವತೋಮುಖವಾದ ಅಭಿವೃದ್ಧಿಗಾಗಿ ಅಗತ್ಯವಿರುವಂತಹ ಕೆಲವು ನಿಯಮಗಳನ್ನು ಗಾಂಧೀಜಿಯವರು ಸ್ಪಷ್ಟವಾಗಿ ವಿವರಿಸಿದ್ದಾರೆ. ಅವರು ನೈತಿಕ ಮೌಲ್ಯಗಳಿಗೆ ಅತ್ಯುನ್ನತ ಸ್ಥಾನ ನೀಡಿದ್ದಾರೆ.

ಇಂತಹ ಹಲವಾರು ಸೈದ್ಧಾಂತಿಕ ಹಿನ್ನೆಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಬಗ್ಗೆ ಹಲವಾರು ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದ್ದು ಅದರಲ್ಲಿ "ಸುವರ್ಣ ಗ್ರಾಮೋದಯ"ವೂ ಪ್ರಮುಖವಾದದ್ದು. ಇಂತಹ ಯೋಜನೆಗಳು ಮತ್ತಷ್ಟು ಜನಪರವಾಗಿ ಯಶಸ್ವಿಯಗಲಿ.

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 31-08-2013ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|
| ಉತ್ತರ ಕನ್ನಡ | 208 | 100 | 100 | 54 | 73 | 81 | 100 | 84 | 1 |
| ಧಾರವಾಡ | 127 | 100 | 100 | 0 | 100 | 95 | 79 | 79 | 2 |
| ದಕ್ಷಿಣ ಕನ್ನಡ | 203 | 100 | 100 | 64 | 58 | 87 | 66 | 79 | 3 |
| ರಾಮನಗರ | 130 | 100 | 100 | 0 | 79 | 66 | 94 | 73 | 4 |
| ಉಡುಪಿ | 146 | 100 | 100 | 40 | 78 | 84 | 22 | 70 | 5 |
| ಗದಗ | 106 | 100 | 99 | 0 | 98 | 94 | 18 | 68 | 6 |
| ಶಿವಮೊಗ್ಗ | 260 | 100 | 100 | 4 | 38 | 71 | 90 | 67 | 7 |
| ದಾವಣಗೆರೆ | 230 | 100 | 100 | 3 | 92 | 56 | 54 | 67 | 8 |
| ಕೊಡಗು | 98 | 100 | 100 | 11 | 25 | 87 | 60 | 63 | 9 |
| ಮಂಡ್ಯ | 232 | 100 | 100 | 2 | 83 | 62 | 26 | 62 | 10 |
| ಹಾವೇರಿ | 208 | 100 | 100 | 0 | 65 | 56 | 37 | 59 | 11 |
| ಮೈಸೂರು | 235 | 100 | 100 | 1 | 22 | 40 | 65 | 54 | 12 |
| ಹಾಸನ | 258 | 100 | 100 | 0 | 23 | 58 | 45 | 54 | 13 |
| ಚಿಕ್ಕಬಳ್ಳಾಪುರ | 226 | 100 | 100 | 18 | 20 | 53 | 30 | 53 | 14 |
| ತುಮಕೂರು | 321 | 100 | 99 | 0 | 18 | 42 | 50 | 51 | 15 |
| ಬೆಂಗಳೂರು (ನ) | 86 | 100 | 100 | 16 | 18 | 30 | 38 | 50 | 16 |
| ಚಾಮರಾಜನಗರ | 120 | 100 | 100 | 0 | 40 | 46 | 18 | 50 | 17 |
| ಬೆಂಗಳೂರು (ಗ್ರಾ) | 98 | 100 | 100 | 4 | 25 | 51 | 19 | 49 | 18 |
| ಚಿಕ್ಕಬಳ್ಳಾಪುರ | 151 | 100 | 98 | 0 | 16 | 61 | 20 | 49 | 19 |
| ಕೊಪ್ಪಳ | 134 | 100 | 100 | 4 | 13 | 50 | 18 | 47 | 20 |
| ಕೋಲಾರ | 156 | 100 | 96 | 0 | 14 | 41 | 5 | 42 | 21 |
| ಬಳ್ಳಾರಿ | 189 | 100 | 60 | 0 | 35 | 39 | 19 | 42 | 22 |
| ಚಿತ್ರದುರ್ಗ | 185 | 100 | 77 | 0 | 14 | 37 | 10 | 39 | 23 |
| ಬಾಗಲಕೋಟೆ | 163 | 100 | 39 | 3 | 49 | 36 | 4 | 38 | 24 |
| ಬೀದರ | 175 | 100 | 74 | 0 | 12 | 22 | 25 | 38 | 25 |
| ಗುಲ್ಬರ್ಗಾ | 220 | 98 | 10 | 0 | 85 | 19 | 11 | 37 | 26 |
| ಬಿಜಾಪುರ | 199 | 100 | 16 | 0 | 38 | 49 | 1 | 34 | 27 |
| ಬೆಳಗಾವಿ | 485 | 100 | 38 | 0 | 5 | 45 | 1 | 31 | 28 |
| ರಾಯಚೂರು | 164 | 100 | 21 | 0 | 0 | 15 | 0 | 22 | 29 |
| ಯಾದಗಿರಿ | 117 | 97 | 0 | 0 | 1 | 18 | 0 | 19 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಆಗಸ್ಟ್ 2013)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಆ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ಶಿವಮೊಗ್ಗ | 13719 | 12550 | 0 | 1 | 807 | 2 | 1 |
| ದಾವಣಗೆರೆ | 7674 | 7565 | 0 | 1 | 403 | 3 | 2 |
| ರಾಮನಗರ | 11532 | 10892 | 0.2 | 8 | 1153 | 1 | 3 |
| ಉತ್ತರ ಕನ್ನಡ | 3951 | 3941 | 0 | 1 | 282 | 5 | 4 |
| ಮಂಡ್ಯ | 5198 | 5132 | 0.1 | 6 | 288 | 4 | 5 |
| ಹಾವೇರಿ | 3777 | 4260 | 0.3 | 10 | 251 | 6 | 6 |
| ಗದಗ | 573 | 1582 | 0 | 1 | 157 | 11 | 7 |
| ಚಾಮರಾಜನಗರ | 1638 | 1130 | 0.2 | 8 | 163 | 9 | 8 |
| ಬಾಗಲಕೋಟೆ | 2904 | 2737 | 0.1 | 6 | 161 | 10 | 9 |
| ಮೈಸೂರು | 5789 | 5779 | 2.6 | 20 | 199 | 7 | 10 |
| ಧಾರವಾಡ | 2759 | 2820 | 0.3 | 10 | 153 | 12 | 11 |
| ಚಿಕ್ಕಬಳ್ಳಾಪುರ | 1103 | 1020 | 0 | 1 | 91 | 18 | 12 |
| ಗುಲ್ಬರ್ಗಾ | 4576 | 4549 | 4 | 26 | 183 | 8 | 13 |
| ಉಡುಪಿ | 1317 | 1287 | 1.1 | 15 | 119 | 13 | 14 |
| ಹಾಸನ | 1596 | 1659 | 1 | 14 | 93 | 17 | 15 |
| ಬಿಜಾಪುರ | 2020 | 1817 | 2.1 | 19 | 96 | 15 | 16 |
| ಚಿಕ್ಕಮಗಳೂರು | 1075 | 902 | 3 | 23 | 97 | 14 | 17 |
| ತುಮಕೂರು | 2460 | 2675 | 2.8 | 21 | 94 | 16 | 18 |
| ದಕ್ಷಿಣ ಕನ್ನಡ | 1789 | 1845 | 1.3 | 16 | 89 | 19 | 19 |
| ಕೊಡಗು | 257 | 268 | 3 | 23 | 51 | 21 | 20 |
| ಕೋಲಾರ | 569 | 636 | 0.5 | 12 | 37 | 26 | 21 |
| ಚಿತ್ರದುರ್ಗ | 680 | 688 | 1.6 | 17 | 42 | 24 | 22 |
| ಕೊಪ್ಪಳ | 547 | 392 | 2 | 18 | 42 | 24 | 23 |
| ಬಳ್ಳಾರಿ | 1551 | 1718 | 5.6 | 28 | 62 | 20 | 24 |
| ಬೀದರ | 352 | 342 | 0.9 | 13 | 20 | 27 | 25 |
| ಬೆಳಗಾವಿ | 2235 | 2149 | 3.9 | 25 | 47 | 23 | 26 |
| ಬೆಂಗಳೂರು ಗ್ರಾಮಾಂತರ | 448 | 287 | 15.3 | 30 | 49 | 22 | 27 |
| ಯಾದಗಿರಿ | 58 | 35 | 2.9 | 22 | 5 | 29 | 28 |
| ಬೆಂಗಳೂರು | 742 | 619 | 4.7 | 27 | 7 | 28 | 29 |
| ರಾಯಚೂರು | 10 | 45 | 8.9 | 29 | 0 | 30 | 30 |

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಅಡಿ ಬರುವ ಕೆರೆಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ.

**ಉಲ್ಲೇಖ:**
1) 2013–14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತ್ 12,000 ಕೆರೆಗಳ ಪುನಃಶ್ಚೇತನಗೊಳಿಸಲು ನೀಡಿದ ಘೋಷಣೆ.
2) ದಿನಾಂಕ:07/08/2013 ರಂದು ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್‌ಗಳ ಕೆರೆಗಳ ಬಗ್ಗೆ ನಡೆದ ಕಾರ್ಯಗಾರದಲ್ಲಿ ತೀರ್ಮಾನಿಸಿದ ರೀತ್ಯ.
3) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತರಿ ಯೋಜನೆಯ ಪರಿಷ್ಕೃತ ಕಾರ್ಯಚರಣೆಯ ಮಾರ್ಗಸೂಚಿಗಳ–2013. 4ನೇ ಆವೃತ್ತಿ

## ಪ್ರಸ್ತಾವನೆ:

ಉಲ್ಲೇಖ–1 ರ ಪ್ರಕಾರ ರಾಜ್ಯದ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 12,000 ಕೆರೆಗಳನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಾಗೂ ಇತರೆ ಯೋಜನೆಗಳಡಿಯ ಅನುದಾನದಲ್ಲಿ ಪುನಃಶ್ಚೇತನಗೊಳಿಸುವ ಕಾರ್ಯಕ್ರಮ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ದಿನಾಂಕ:07/08/2013 ರಂದು ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಈ ವಿಷಯ ಕುರಿತು ಒಂದು ದಿನದ ಕಾರ್ಯಗಾರವನ್ನು ನಡೆಸಲಾಯಿತು. ಸದರಿ ಕಾರ್ಯಗಾರದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಮಾನ್ಯ ಸಣ್ಣ ನೀರಾವರಿ ಸಚಿವರು, ಮಾನ್ಯ ನಗರಾಭಿವೃದ್ಧಿ ಸಚಿವರು, ಡಾ||.ರಾಜೇಂದ್ರಸಿಂಗ್ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತರು, ಡಾ||.ಯಲ್ಲಪ್ಪರೆಡ್ಡಿ, ಪರಿಸರ ತಜ್ಞರು, ಆಯ್ದ ಜಿಲ್ಲಾ ಪಂಚಾಯತ್‌ಗಳ ಅದ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಕಾರ್ಯಪಾಲಕ ಅಭಿಯಂತರರು ಭಾಗವಹಿಸಿ ಸಲಹೆ/ಸೂಚನೆಗಳನ್ನು ನೀಡಿದರು.

ಸದರಿ ಕಾರ್ಯಗಾರದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ನೀರಿಲ್ಲದೆ ಬತ್ತಿ ಹೋಗಿರುವ 12,000 ಸಣ್ಣ ಕೆರೆಗಳು, ಗೋಕಟ್ಟೆಗಳು, ಕಲ್ಯಾಣಿಗಳು ಇವುಗಳನ್ನು ಮಹಾತ್ಮಾಗಾಂದಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹಾಗೂ ಇತರೆ ಯೋಜನೆಗಳ ಅನುದಾನದ ಅಡಿ ಪುನಃಶ್ಚೇತನಗೊಳಿಸಿ ಜಲಸಂಪನ್ಮೂಲ ಹೆಚ್ಚಿಸಲು, ಅಂತರ್ಜಲದ ಮಟ್ಟ ಹೆಚ್ಚಿಸಲು ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಅನುಕೂಲವಾಗುತ್ತದೆ ಹಾಗೂ ಪರಿಸರ ಸಂರಕ್ಷಣೆಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಕೆರೆಗಳ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ,ಫೀಡರ್ ಚಾನಲ್‌ಗಳ ಅಭಿವೃದ್ಧಿ, ಕೆರೆ ಕೋಡಿಗಳು, ಹೂಳೆತ್ತುವುದು, ಬದುಗಳ ಅಭಿವೃದ್ಧಿ ಮುಂತಾದ ಕಾಮಗಾರಿಗಳನ್ನು ಉಲ್ಲೇಖ–3ರ ಮಾರ್ಗ ಸೂಚಿಗಳ ಅನ್ವಯ ಗ್ರಾಮಸಭೆಗಳಲ್ಲಿ ಅನುಮೋದನೆ ಪಡೆದುಕೊಂಡು ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ. ಇದಲ್ಲದೆ, ಇದಕ್ಕಾಗಿ ಅಗತ್ಯ ಕಾರ್ಯ ಯೋಜನೆ ರೂಪಿಸುವಂತೆ ತೀರ್ಮಾನಿಸಲಾಯಿತು. ಆದುದರಿಂದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 186 ಉಖಾಯೋ 2013 ಬೆಂಗಳೂರು ದಿನಾಂಕ: 14–08–2013

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಗಧಿ ಪಡಿಸಿದ ಆಧ್ಯತಾ ಕಾಮಗಾರಿಗಳ **ಐದನೇ ಪ್ರವರ್ಗದಡಿ** ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ 12,000 ಸಣ್ಣ ಕೆರೆಗಳು, ಗೋ ಕಟ್ಟೆಗಳು, ಕಲ್ಯಾಣಿಗಳು ಸೇರಿದಂತೆ ಇವುಗಳನ್ನು ಈ ಯೋಜನೆಯಡಿ ಹಾಗೂ ಇತರೆ ಯೋಜನೆಗಳ ಅನುದಾನದ ಅಡಿ ಪುನಃಶ್ಚೇತನಗೊಳಿಸಲು ಈ ಕೆಳಕಂಡ ಷರತ್ತುಗಳ ಅನುಪಾಲನೆಗೆ ಒಳಪಟ್ಟು ಆದೇಶಿಸಿದೆ.

## ಷರತ್ತುಗಳು :

1. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯಪಾಲಕ ಅಭಿಯಂತರರು, ತಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ/ತಹಸಿಲ್ದಾರರಿಂದ ವಿವರ ಪಡೆಯುವುದು.

2. ಜಿಲ್ಲಾ ಪಂಚಾಯಿತಿಯ ಎಲ್ಲಾ ಕೆರೆಗಳು, ಗೋಕಟ್ಟೆಗಳು ಮತ್ತು ಕಲ್ಯಾಣಿಗಳು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಮತ್ತು ಇತರೆ ಯೋಜನೆಗಳಿಗೆ ಅರ್ಹವಾಗಿದ್ದು ಅವುಗಳನ್ನು ಪರಿಗಣಿಸಬೇಕಾಗಿರುತ್ತದೆ 2013–14ನೇ ಸಾಲಿನಲ್ಲಿ ಕನಿಷ್ಠ ಪ್ರತಿ ಗ್ರಾಮ ಪಂಚಾಯಿತಿಗೆ 2 ಕೆರೆಗಳು, ಗೋಕಟ್ಟೆ, ಕಲ್ಯಾಣಿಗಳನ್ನು ಆಯ್ಕೆ ಮಾಡಿಕೊಂಡು ಅಥವಾ ಪ್ರತಿ ತಾಲ್ಲೂಕಿಗೆ ಸುಮಾರು 70 ಕೆರೆಗಳು/ಗೋಕಟ್ಟೆ/ಕಲ್ಯಾಣಿಗಳನ್ನುಆಯ್ಕೆ ಮಾಡಿಕೊಂಡು ಹೀಗೆ ಒಟ್ಟು 12,000 ಕೆರೆಗಳನ್ನು ಪುನಃಶ್ಚೇತನಗೊಳಿಸುವಿಕೆಗೆ ಕ್ರಮ ವಹಿಸತಕ್ಕದ್ದು.

3. ಕೆರೆಗಳ ಸರ್ವೆ, ಮ್ಯಾಪಿಂಗ್ ಮಾಡುವುದು. ಇದರಲ್ಲಿ ಗೋ ಕಟ್ಟೆ, ಕಲ್ಯಾಣಿ, ಅತಿ ಸಣ್ಣ ಕೆರೆಗಳಿಗೆ ಮೊದಲ ಆದ್ಯತೆ ನೀಡುವುದು.

4. ಗ್ರಾಮ ಸಭೆ ನಡೆಸಿ ಕಾಮಗಾರಿಗಳಿಗೆ ಹಾಗೂ ಯೋಜನೆಗೆ ಅನುಮೋದನೆ ಪಡೆಯುವುದು.

5. ಕಾಮಗಾರಿಗಳಲ್ಲಿ ಮೊದಲು ಜಲಾನಯನ ಪ್ರದೇಶ (ಕ್ಯಾಚ್‌ಮೆಂಟ್ ಏರಿಯಾ) ಅಭಿವೃದ್ಧಿ, ಕೆರೆಗಳಿಗೆ ಬರುವ ನೀರುಗಾಲುವೆಗಳ ಅಭಿವೃದ್ಧಿ ಕೋಡಿಗಳ ಅಭಿವೃದ್ಧಿ (Waste weir), ಕೆರೆಗಳ ಬದುಗಳ ಅಭಿವೃದ್ಧಿ, ಸರ್ವೀಸ್ ರಸ್ತೆಗಳ ಅಬಿವೃದ್ಧಿ, ರಾಜ ಕಾಲುವೆಗಳ ಅಭಿವೃದ್ಧಿ, ನಂತರ ಹೂಳೆತ್ತುವುದು, ಇತರೆ ಕೆಲಸಗಳನ್ನು ಅಗತ್ಯತೆ ಆಧರಿಸಿ ಅಂದಾಜು ಪಟ್ಟಿ ತಯಾರಿಸಿಕೊಂಡು ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದು ಕಾಮಗಾರಿಗಳನ್ನು ಪ್ರಾರಂಭಿಸುವುದು.


6. ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಆದ ನಂತರ, ಸದರಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಗೆ ಸೇರ್ಪಡೆ ಮಾಡಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಇತರೆ ಯೋಜನೆಗಳ ಅನುದಾನದಲ್ಲಿ ಲಭ್ಯತೆಗೆ ಅನುಸಾರ ತೆಗೆದುಕೊಳ್ಳುವುದು.

7. ಸದರಿ ಕಾಮಗಾರಿಗಳನ್ನು ಗ್ರಾಮ ಪಂಚಾಯತಿಯ ಹೆಚ್ಚುವರಿ ಕ್ರಿಯಾ ಯೋಜನೆಯೆಂದು ಪರಿಗಣಿಸುವುದು.

8. 2013–14 ನೇ ಸಾಲಿನಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೆಳಗಿನ ವೇಳಾ ಪಟ್ಟಿಯಂತೆ ಕ್ರಮ ಜರುಗಿಸುವುದು.

   i) ಕೆರೆಗಳು/ಗೋಕಟ್ಟೆ/ಕಲ್ಯಾಣಿಗಳನ್ನು ಗುರುತಿಸುವುದು : 20–08–213
   ii) ಸರ್ವೆ/ಮ್ಯಾಪಿಂಗ್ ಮಾಡಿಸುವುದು : 30–08–2013
   iii) ಗ್ರಾಮ ಸಭೆ ನಡೆಸಿ ಯೋಜನೆಗೆ ಅನುಮೋದನೆ ಪಡೆಯುವುದು : 15–09–2013
   iv) ಅಂದಾಜು ಪತ್ರಿಕೆ ತಯಾರಿಸುವುದು : 20–09–2013
   v) ಆಡಳಿತಾತ್ಮಕ/ತಾಂತ್ರಿಕ ಅನುಮೋದನೆ : 25–09–2013
   vi) ಕಾಮಗಾರಿ ವಿದ್ಯುಕ್ತ ಪ್ರಾರಂಭ : 02–10–2013

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,



(ಮುನೀಶ್ ಮೌದ್ಗಿಲ್)
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಅಡಿ ಮೊದಲ ಹಂತದಲ್ಲಿ ಸಣ್ಣ ಕೆರೆ, ಕಲ್ಯಾಣಿ, ಗೋಕಟ್ಟೆಗಳನ್ನು ಮನಶ್ಚೇತನಗೊಳಿಸುವ ಬಗ್ಗೆ.

**ಓದಲಾಗಿದೆ:**

1. 2013–14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತ್ 12000 ಕೆರೆಗಳ ಪುನ:ಶ್ಚೇತನಗೊಳಿಸಲು ನೀಡಿದ ಘೋಷಣೆ
2. ದಿನಾಂಕ:7–8–2013ರಂದು ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್‌ಗಳ ಕೆರೆಗಳ ಬಗ್ಗೆ ನಡೆದ ಕಾರ್ಯಾಗಾರದಲ್ಲಿ ತೀರ್ಮಾನಿಸಿದ ರೀತ್ಯ.
3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಷ್ಕೃತ ಕಾರ್ಯಾಚರಣೆಯ ಮಾರ್ಗಸೂಚಿಗಳ2013, 4ನೇ ಆವೃತ್ತಿ.
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:186:ಉಖಾಯೋ:2013, ಬೆಂಗಳೂರು ದಿನಾಂಕ:14–8–2013

## ಪ್ರಸ್ತಾವನೆ:

ಉಲ್ಲೇಖ–1ರ ಪ್ರಕಾರ ರಾಜ್ಯದ ಜಿಲ್ಲಾ ಪಂಚಾಯತಿ ವ್ಯಾಪ್ತಿಯ 12,000 ಕೆರೆಗಳನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹಾಗೂ ಇತರೆ ಯೋಜನೆಗಳಡಿಯ ಅನುದಾನದಲ್ಲಿ ಪುನ:ಶ್ಚೇತನಗೊಳಿಸುವ ಕಾರ್ಯಕ್ರಮ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಈ ಕುರಿತಂತೆ, ದಿನಾಂಕ:7–8–2013ರಂದು ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಈ ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ನಡೆಸಿ, ಸವಿಸ್ತಾರವಾಗಿ ಚರ್ಚಿಸಲಾಗಿದ್ದು, ಅದರಂತೆ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ನೀರಿಲ್ಲದೆ, ಬತ್ತಿರುವ 12,000 ಸಣ್ಣ ಕೆರೆಗಳು, ಗೋಕಟ್ಟೆಗಳು, ಕಲ್ಯಾಣಿಗಳು ಇವುಗಳನ್ನು ಮಹಾತ್ಮಾಗಾಂದಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಹಾಗೂ ಇತರೆ ಯೋಜನೆಗಳ ಅನುದಾನದಡಿ ಪುನ:ಶ್ಚೇತನಗೊಳಿಸುವ ಸಂಬಂಧ, ತೆಗೆದುಕೊಳ್ಳಬೇಕಾದ ಎಲ್ಲಾ ಕ್ರಮಗಳ ಕುರಿತು ಸವಿವರವಾಗಿ ಈಗಾಗಲೇ ಉಲ್ಲೇಖ –4ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.

ಪ್ರಸ್ತುತ ಈ ಕಾರ್ಯಕ್ರಮವನ್ನು ಪರಿಣಾಮಕಾರಿ ಹಾಗೂ ಹೆಚ್ಚು ಜನೋಪಯೋಗಿ ಆಗುವಂತೆ ಮಾಡುವ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ಈಗಾಗಲೇ ಜಲಾನಯನ ಇಲಾಖೆಯಿಂದ ಜಲಾನಯನ ಪ್ರದೇಶಗಳನ್ನು ಅಭಿವೃದ್ಧಿಪಡಿಸಿರುವ ವ್ಯಾಪ್ತಿಯಲ್ಲಿ ಬರುವ ಹಾಗೂ ಮಳೆ ನೀರಿನಿಂದ ನಿಯತಕಾಲಿಕವಾಗಿ ತುಂಬಿ ಹರಿಯುವ 10 ಹೆಕ್ಟೇರಿಗಿಂತ ಕಡಿಮೆ ಇರುವ ಕೆರೆ, ಕಲ್ಯಾಣಿ ಮತ್ತು ಗೋಕಟ್ಟೆಗಳನ್ನು ಗುರುತಿಸುವುದು ಮತ್ತು ಇವುಗಳನ್ನು ಪ್ರಥಮ ಆದ್ಯತೆಯಲ್ಲಿ ಪುನ:ಶ್ಚೇತನಗೊಳಿಸುವುದು ಅತ್ಯವಶ್ಯವಾಗಿರುತ್ತದೆ. ಪ್ರಯುಕ್ತ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ: 186 ಉಖಾಯೋ :2013, ಬೆಂಗಳೂರು, ದಿನಾಂಕ: 22–8–2013

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಅಡಿ ಮೊದಲ ಹಂತದಲ್ಲಿ ಕೆರೆಗಳ ಮನಶ್ಚೇತನಗೊಳಿಸಲು ದಿನಾಂಕ: 14–08–2013ರ ಆದೇಶವನ್ನು ಮುಂದುವರೆಸಿ ಈ ಕೆಳಕಂಡ ಸೂಚನೆಗಳನ್ನು ನೀಡಿದೆ.

### ಕೆರೆಗಳ ಆಯ್ಕೆಗೆ ಮಾನದಂಡಗಳು:

1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಗದಿಪಡಿಸಿದ ಆದ್ಯತಾ ಕಾಮಗಾರಿಗಳ 5ನೇ ಪ್ರವರ್ಗದಡಿ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ 12000 ಸಣ್ಣ ಕೆರೆಗಳು, ಕಲ್ಯಾಣಿಗಳು, ಗೋಕಟ್ಟೆಗಳು ಪೈಕಿ, 10 ಹೆಕ್ಟೇರಿಗಿಂತ ಕಡಿಮೆ ಕ್ಷೇತ್ರ ಇರುವ ಕೆರೆಗಳು, ಕಲ್ಯಾಣಿಗಳು, ಗೋಕಟ್ಟೆಗಳನ್ನು ಪ್ರಥಮ ಹಂತದಲ್ಲಿ ಆಯ್ಕೆ ಮಾಡತಕ್ಕದ್ದು.

2. ಆಯ್ಕೆ ಮಾಡುವ ಕೆರೆ, ಕಲ್ಯಾಣಿ, ಗೋಕಟ್ಟೆಗಳು ಮಳೆ ನೀರಿನಿಂದ ನಿಯತಕಾಲಿಕವಾಗಿ ಕೋಡಿ ತುಂಬಿ ಹರಿಯುವಂತಾವುಗಳಾಗಿರಬೇಕು.

3. ಜಲಾನಯನ/ಸುಜಲಾ ಇಲಾಖೆಯಿಂದ ಅಭಿವೃದ್ಧಿಪಡಿಸಿರುವ ಜಲಾನಯನ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಕೆರೆ, ಕಲ್ಯಾಣಿ, ಗೋಕಟ್ಟೆಗಳನ್ನು ಆಯ್ಕೆ ಮಾಡಲು ಆದ್ಯತೆ ನೀಡುವುದು.

4. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯಪಾಲಕ ಇಂಜಿನಿಯರ್‌ಗಳು ತಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು / ತಹಸೀಲ್ದಾರ್‌ಗಳಿಂದ ಸಣ್ಣ / 10 ಹೆಕ್ಟೇರ್‌ಗಿಂತ ಕಡಿಮೆಯಿರುವ ಕೆರೆಗಳು, ಕಲ್ಯಾಣಿ, ಗೋಕಟ್ಟೆಗಳ ವಿವರಗಳನ್ನು ಪಡೆಯುವುದು.

5. ಜಲಾನಯನ ಅಧಿಕಾರಿಗಳಿಂದ ಆಯಾ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಿರುವ ಜಲಾನಯನದ ಪ್ರದೇಶಗಳ ವಿವರಗಳನ್ನು ಪಡೆದು ಆಯಾ ಜಲಾನಯನ ವ್ಯಾಪ್ತಿಯಲ್ಲಿ ಬರುವ ಕೆರೆ, ಗೋಕಟ್ಟೆ, ಕಲ್ಯಾಣಿಗಳನ್ನು ಗುರುತಿಸುವುದು.

6. ಕೆರೆಗಳ ಪುನ:ಶ್ಚೇತನದ ಕಾರ್ಯಕ್ರಮದ ಕ್ರಿಯಾ ಯೋಜನೆ ತಯಾರಿಕೆ ಅನುದಾನದ ಬಳಕೆ ಹಾಗೂ ಅನುಷ್ಠಾನದ ವೇಳಾಪಟ್ಟಿಯನ್ನು ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:186:ಉಖಾಯೋ:2013, ಬೆಂಗಳೂರು ದಿನಾಂಕ:14–8–2013ರ ಆದೇಶ ದಲ್ಲಿರುವ ಷರತ್ತುಗಳನ್ನು ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,



(ಮುನೀಶ್ ಮೌದ್ಗಿಲ್)
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 116 ಗ್ರಾಪಂಅ 2013(ಪಿ–1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ : 30.07.2013

# ಸುತ್ತೋಲೆ

**ವಿಷಯ:** ಭಾರತದ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಪ್ರತಿದಿನ ಹಾರಿಸುವ ಬಗ್ಗೆ.

ಭಾರತದ ರಾಷ್ಟ್ರ ಧ್ವಜವು ಸಮಗ್ರ ಭಾರತೀಯರ ಭರವಸೆ, ಭಾವೈಕ್ಯತೆ, ಮಹತ್ವಾಕಾಂಕ್ಷೆ ಹಾಗೂ ಹೆಮ್ಮೆಯ ಪ್ರತೀಕವಾಗಿದೆ. ರಾಷ್ಟ್ರ ಧ್ವಜದ ಬಗ್ಗೆ ಸಾರ್ವತ್ರಿಕ ವಾತ್ಸಲ್ಯ, ಗೌರವ ಹಾಗೂ ಸ್ವಾಮಿನಿಷ್ಠೆಯನ್ನು ಭಾರತೀಯರು ವ್ಯಕ್ತ ಪಡಿಸಬೇಕಾಗಿದೆ. ರಾಷ್ಟ್ರೀಯ ಸ್ವಾಭಿಮಾನ, ವೈಭವ ಹಾಗೂ ಹೆಗ್ಗಳಿಕೆಯ ಪ್ರತೀಕವಾಗಿರುವ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಹಾಗೂ ಜಿಲ್ಲಾ ಪಂಚಾಯತಿಗಳು ತಮ್ಮ ಕಾರ್ಯಾಲಯದ ಆವರಣದಲ್ಲಿ ನಿರ್ಮಿಸಿರುವ ಧ್ವಜ ಸ್ತಂಭದಲ್ಲಿ ಪ್ರತಿದಿನ ಘನತೆ ಮತ್ತು ಗೌರವಯುತವಾಗಿ ಹಾರಾಡಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ರಾಷ್ಟ್ರ ಧ್ವಜ ಪ್ರದರ್ಶನವನ್ನು "ಲಾಂಛನ ಮತ್ತು ಅಭಿದಾನ(ಅಸಮರ್ಪಕ ಬಳಕೆಯ ತಡೆ)ಕಾಯಿದೆ, 1950, ಮತ್ತು 'ರಾಷ್ಟ್ರ ಘನತೆಯಡೆಗಿನ ಅಪಮಾನ ತಡೆ ಕಾಯಿದೆ, 1971 ಇವುಗಳ ಅನುಗುಣವಾಗಿ ಭಾರತದ ಧ್ವಜ ಸಂಹಿತೆ 2002 ಅನ್ನು ರೂಪಿಸಿದ್ದು, ಇದರಲ್ಲಿ ರಾಷ್ಟ್ರ ಧ್ವಜದ ಪ್ರದರ್ಶನಕ್ಕೆ ಸಂಬಂಧಿಸಿದ ಎಲ್ಲಾ ನಿಯಮಗಳು, ಆಚರಣೆ, ಸಂಪ್ರದಾಯ ಮತ್ತು ಸೂಚನೆಗಳು ಒಳಗೊಂಡಿರುತ್ತವೆ

ಈ ಮಾರ್ಗಸೂಚಿಗಳಲ್ಲಿ ತಿಳಿಸಿರುವ ಶಿಷ್ಟಾಚಾರ ಮತ್ತು ನಿಯಮಗಳನ್ವಯ ರಾಷ್ಟ್ರ ಧ್ವಜವನ್ನು ಪ್ರತಿನಿತ್ಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳ ಆವರಣದ ಧ್ವಜ ಸ್ತಂಭದ ಮೇಲೆ ತಪ್ಪದೇ ಪ್ರದರ್ಶಿಸಲು ಸಂಬಂಧಿಸಿದ ಕಛೇರಿಗಳ ಮುಖ್ಯಸ್ಥರುಗಳು ಕ್ರಮ ವಹಿಸಬೇಕೆಂದು ಕಟ್ಟು ನಿಟ್ಟಿನ ಸೂಚನೆ ನೀಡಲಾಗಿದೆ. **2013ರ ಆಗಸ್ಟ್ 15 ರಿಂದ ಪ್ರಾರಂಭಿಸಿ ನಿರಂತರವಾಗಿ ಪ್ರತಿದಿನ ನಿಯಮಾನುಸಾರ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳ ಆವರಣದ ಧ್ವಜ ಸ್ತಂಭದ ಮೇಲೆ ಹಾರಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ. ರಾಷ್ಟ್ರ ಧ್ವಜಾರೋಹಣಕ್ಕೆ ಸಂಬಂಧಿಸಿದ ಸಂಕ್ಷಿಪ್ತ ವಿಧಿವಿಧಾನಗಳನ್ನು ಕೆಳಗೆ ನಮೂದಿಸಲಾಗಿದೆ.**

1. ಈಗಾಗಲೇ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳ ಆವರಣದಲ್ಲಿ ಧ್ವಜ ಸ್ತಂಭಗಳಿದ್ದಲ್ಲಿ ಅದನ್ನೇ ಬಳಸುವುದು ಹಾಗೂ ಯಾವುದಾದರೂ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಧ್ವಜ ಸ್ತಂಭಗಳಿಲ್ಲದ ಸಂದರ್ಭದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಯೋಗದೊಂದಿಗೆ ಕೂಡಲೇ ಧ್ವಜ ಸ್ತಂಭವನ್ನು ನಿರ್ಮಿಸಲು ಕ್ರಮವಹಿಸುವುದು. ಧ್ವಜ ಸ್ತಂಭವು ಕಟ್ಟಡದ ಮುಂಭಾಗ ಅಥವಾ ಕಟ್ಟಡದ ಮೇಲೆ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ 'ನಿಧಿ'ಗಳಿಂದ ಭರಿಸುವುದು.(ಸ್ವಂತ ಸಂಪನ್ಮೂಲ ಅಥವಾ 13ನೇ ಹಣಕಾಸು ಆಯೋಗದ ಅನುದಾನದಿಂದ ವೆಚ್ಚ ಭರಿಸಿ, ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯುವುದು)
2. ಧ್ವಜ ಸಂಹಿತೆಯಲ್ಲಿ ನಮೂದಿಸಿರುವ ಭಾಗ–I ರ ಅಳತೆಯ ಧ್ವಜಗಳು ಅಂದರೆ 4(1800x1200ಮಿ.ಮೀ),

5 (1350x900ಮಿ.ಮೀ), ಮತ್ತು 6(900x600ಮಿ.ಮೀ) ರಂತೆ ಕ್ರಮವಾಗಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳು ಅಳಡಿಸಿಕೊಳ್ಳುವುದು.

3. ಪ್ರತಿಯೊಂದು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿಗಳು ಒಂದೇ ಬಾರಿಗೆ ತಲಾ 3 ರಾಷ್ಟ್ರಧ್ವಜಗಳನ್ನು ಸ್ಥಳೀಯ ಸರ್ಕಾರಿ ಅಧಿಕೃತ ಖಾದಿ ಭಂಡಾರಗಳಿಂದ ಖರೀದಿಸಲು ಕ್ರಮ ವಹಿಸುವುದು.

4. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿಗಳು ತಮ್ಮಲ್ಲಿನ ನಿಧಿಗಳಿಂದ ಹಾಗೂ ಸ್ವಂತ ಸಂಪನ್ಮೂಲ ಅಥವಾ 13ನೇ ಹಣಕಾಸು ಆಯೋಗದ ಅನುದಾನದಿಂದ ರಾಷ್ಟ್ರಧ್ವಜಗಳನ್ನು ಖರೀದಿಸುವುದು.

5. ಗ್ರಾಮ ಪಂಚಾಯತಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ನೇತೃತ್ವದಲ್ಲಿ ಕಾರ್ಯದರ್ಶಿ, ಬಿಲ್ ಕಲೆಕ್ಟರ್ ಹಾಗೂ ವಾಟರ್‌ಮನ್‌ಗಳ ಸಮನ್ವಯತೆಯೊಂದಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ಹಾಗೂ ಇಳಿಸುವ ಜವಾಬ್ದಾರಿಯ ಕಾರ್ಯ ನಿರ್ವಹಿಸುವುದು. ತಾಲ್ಲೂಕಾ ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ಧರಿಸುವ ನೌಕರರು/ಸಿಬ್ಬಂದಿ ವರ್ಗದವರ ಸಮನ್ವಯತೆಯೊಂದಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ಹಾಗೂ ಇಳಿಸುವ ಜವಾಬ್ದಾರಿಯ ಕಾರ್ಯ ನಿರ್ವಹಿಸುವುದು. ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ಧರಿಸುವ ನೌಕರರು/ಸಿಬ್ಬಂದಿ ವರ್ಗದವರ ಸಮನ್ವಯತೆಯೊಂದಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ಹಾಗೂ ಇಳಿಸುವ ಜವಾಬ್ದಾರಿಯ ಕಾರ್ಯ ನಿರ್ವಹಿಸುವುದು.

6. ಧ್ವಜ ಸಂಹಿತೆಯ ಉಧೃತ ಭಾಗ ಮತ್ತು ಕನ್ನಡ ಅನುವಾದವನ್ನು ಸಹ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದ್ದು, ಅದರಿಂದ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುವುದು.

7. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಸಿಬ್ಬಂದಿಗಳಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ವಿಧಾನದ ಬಗ್ಗೆ ಸ್ಥಳೀಯ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರಿಂದ ತರಬೇತಿ ಕೊಡಿಸುವುದು. ಈ ತರಬೇತಿಯನ್ನು ಸತತವಾಗಿ ಆಗಸ್ಟ್ ಮೊದಲನೆಯ ವಾರದಲ್ಲಿ ನಡೆಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯನ್ನು ಕರೆದು ಕ್ರಮ ತೆಗೆದುಕೊಳ್ಳುವುದು.

8. ರಾಷ್ಟ್ರ ಧ್ವಜವನ್ನು ಏರಿಸುವ ಹಾಗೂ ಇಳಿಸುವ ಪದ್ದತಿಯ ಮಾದರಿ ಪ್ರಾತ್ಯಕ್ಷಿಕೆಯನ್ನು ಯು–ಟ್ಯೂಬ್‌ನಲ್ಲಿ ಅಳವಡಿಸಿ, ಪ್ರಚುರಪಡಿಸಲು ಎಸ್.ಐ.ಆರ್.ಡಿಯು ಕ್ರಮವಹಿಸುವುದು.

ಭಾರತದ ಧ್ವಜ ಸಂಹಿತೆ 2002ರ ಪ್ರಕಾರ ಧ್ವಜ ಪ್ರದರ್ಶನಕ್ಕೆ ನಿಗಧಿಪಡಿಸಿರುವ ನಿಬಂಧನೆಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುವುದು ಹಾಗೂ ಯಾವುದೇ ಸಂದಂರ್ಭದಲ್ಲೂ ಧ್ವಜದ ಗೌರವ ಮತ್ತು ಘನತೆಗೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸುವುದು.

(ಟಿ.ಎಂ.ವಿಜಯಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ವಿಷಯ:** ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದ ಅನುಷ್ಠಾನ ಕುರಿತಾದ ಮಾರ್ಗಸೂಚಿಗಳನ್ನು ಪರಿಷ್ಕೃತಗೊಳಿಸುವ ಕುರಿತು

**ಓದಲಾಗಿದೆ :** (1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:29:ಸುಗ್ರಾಯೋ:2012, ದಿನಾಂಕ: 29.06.2012

(2) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ: 29: ಸುಗ್ರಾಯೋ: 2012, ದಿನಾಂಕ:04.07.2012

## ಪ್ರಸ್ತಾವನೆ:

ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾದ "ಸುವರ್ಣ ಗ್ರಾಮೋದಯ ಯೋಜನೆ"ಯ ಐದನೇ ಹಂತವು ದಿನಾಂಕ:29.062012ರಿಂದ ಜಾರಿಗೆ ಬಂದಿರುತ್ತದೆ. ಐದನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಓದಲಾದ(1)ರ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ. ಐದನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ವಿವರವಾದ ಮಾರ್ಗಸೂಚಿಗಳನ್ನು ಓದಲಾದ(2)ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಓದಲಾದ(2)ರ ಸುತ್ತೋಲೆಯ ಅನುಸಾರ ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದಲ್ಲಿ ಆಯ್ಕೆಯಾದ ಗ್ರಾಮಗಳಿಗೆ ಈಗಾಗಲೇ ಹಂಚಿಕೆ ಮಾಡಿರುವ ಅನುದಾನ ಪೈಕಿ ಶೇ.70ರಷ್ಟು ಅನುದಾನವನ್ನು ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ; ಶೇ.3ರಷ್ಟು ಅನುದಾನವನ್ನು ಘನ ತ್ಯಾಜ್ಯವಸ್ತು ವಿಲೇವಾರಿ ಸಂಬಂಧಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ; ಶೇ.2ರಷ್ಟು ಅನುದಾನವನ್ನು ಸೌರ ಬೀದಿ ದೀಪ ಅಳವಡಿಸುವ ಸಲುವಾಗಿ; ಶೇ.10ರಷ್ಟು ಅನುದಾನವನ್ನು ಒಂದು ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಹಾಗೂ ಉಳಿದ ಶೇ.15ರಷ್ಟು ಅನುದಾನವನ್ನು ಆದ್ಯತೆ ಹಾಗೂ ಅಗತ್ಯತೆ ಮೇರೆಗೆ ಶಾಲಾ ಕಟ್ಟಡ, ಗ್ರಾಮ ಪಂಚಾಯತಿ ಕಟ್ಟಡ, ಗ್ರಂಥಾಲಯ ಕಟ್ಟಡಕ್ಕೆ, ಮಹಿಳಾ ಸ್ವ-ಸಹಾಯ ಸಂಘಗಳ ಕಾರ್ಯಕೇಂದ್ರಗಳ (ವರ್ಕ್‌ಶೆಡ್) ನಿರ್ಮಾಣ, ಬಯಲು ರಂಗಮಂದಿರಗಳು ಮತ್ತು ಕೊನೆಯ ಆದ್ಯತೆಯಾಗಿ ಸಮುದಾಯ ಭವನಗಳು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಚಟುವಟಿಕೆಗಳಿಗೆ ವಿನಿಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಓದಲಾದ(2)ರ ಸುತ್ತೋಲೆಯ ಮೂಲಕ ಹೊರಡಿಸಲಾದ ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತದ ಅನುಷ್ಠಾನ ಮಾರ್ಗಸೂಚಿಗಳನ್ನು ಆಡಳಿತಾತ್ಮಕ ಕಾರಣಗಳಿಗಾಗಿ ಬದಲಾಯಿಸಿ ಸ್ಮಶಾನ(ರುದ್ರಭೂಮಿ) ಅಭಿವೃದ್ಧಿಯ ಕಾಮಗಾರಿಗಳಿಗೆ ಅವಕಾಶ ನೀಡುವ ಅಗತ್ಯತೆಯನ್ನು ಸರ್ಕಾರವು ಮನಗಂಡಿದೆ. ಅದಕ್ಕಾಗಿ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 37 ಸುಗ್ರಾಯೋ 2013, ಬೆಂಗಳೂರು, ದಿನಾಂಕ:12.07.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಸುವರ್ಣ ಗ್ರಾಮೋದಯ ಯೋಜನೆಯ ಐದನೇ ಹಂತವನ್ನು ಅನುಷ್ಠಾನಗೊಳಿಸುವ ಸಂಬಂಧ ಆಯ್ಕೆ ಮಾಡಲಾದ ಗ್ರಾಮಗಳಿಗೆ ಹಾಗು ಈ ಗ್ರಾಮಗಳಿಗೆ ಹಂಚಿಕೆ ಮಾಡಿರುವ ಅನುದಾನದ ವಿನಿಯೋಗಕ್ಕಾಗಿ ಓದಲಾದ(2)ರ ಸುತ್ತೋಲೆ ಮೂಲಕ ಹೊರಡಿಸಲಾಗಿದ್ದ ಮಾರ್ಗಸೂಚಿಗಳನ್ನು **ಸ್ಮಶಾನ(ರುದ್ರಭೂಮಿ) ಅಭಿವೃದ್ಧಿಯ ಕಾಮಗಾರಿಗಳನ್ನು ಸೇರಿಸಿ ಈ ಕೆಳಗಿನಂತೆ ಮಾರ್ಪಡಿಸಿ ಆದೇಶಿಸಲಾಗಿದೆ. ಈ ಷರತ್ತುಗಳನ್ವಯ ಮಾತ್ರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು. . .**

1. ಗ್ರಾಮಗಳಿಗೆ ಈಗಾಗಲೇ ಹಂಚಿಕೆ ಮಾಡಿರುವ ಅನುದಾನ ಪೈಕಿ ಶೇ.70ರಷ್ಟು ಅನುದಾನವನ್ನು ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ವಿನಿಯೋಗಿಸುವುದು.

2. ಶೇ.3ರಷ್ಟು ಅನುದಾನವನ್ನು ಘನ ತ್ಯಾಜ್ಯವಸ್ತು ವಿಲೇವಾರಿ ಸಂಬಂಧಿತ ಕಾಮಗಾರಿಗಳ ಅನುಷ್ಟಾನಕ್ಕಾಗಿ ವಿನಿಯೋಗಿಸುವುದು.

3. ಶೇ.2ರಷ್ಟು ಅನುದಾನವನ್ನು ಸೌರ ಬೀದಿ ದೀಪ ಅಳವಡಿಸುವ ಸಲುವಾಗಿ ವಿನಿಯೋಗಿಸುವುದು.

4. ಶೇ.10ರಷ್ಟು ಅನುದಾನವನ್ನು ಒಂದು ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ವಿನಿಯೋಗಿಸುವುದು.

5. **ಶೇ.8ರಷ್ಟು ಅನುದಾನವನ್ನು ಸ್ಮಶಾನ ಅಥವಾ ರುದ್ರಭೂಮಿ ಅಭಿವೃದ್ಧಿ ಸಂಬಂಧಿತ ಕಾಮಗಾರಿಗಾಗಿ ವಿನಿಯೋಗಿಸುವುದು.**

6. ಹಾಗು ಉಳಿದ ಶೇ.7ರಷ್ಟು ಅನುದಾನವನ್ನು ಆದ್ಯತೆ ಹಾಗೂ ಅಗತ್ಯತೆ ಮೇರೆಗೆ ಶಾಲಾ ಕಟ್ಟಡ, ಗ್ರಾಮ ಪಂಚಾಯತಿ ಕಟ್ಟಡ, ಗ್ರಂಥಾಲಯ ಕಟ್ಟಡಕ್ಕೆ, ಮಹಿಳಾ ಸ್ವ-ಸಹಾಯ ಸಂಘಗಳ ಕಾರ್ಯಕೇಂದ್ರಗಳ (ವರ್ಕ್‌ಶೆಡ್) ನಿರ್ಮಾಣ, ಬಯಲು ರಂಗಮಂದಿರಗಳು ಮತ್ತು ಕೊನೆಯ ಆದ್ಯತೆಯಾಗಿ ಸಮುದಾಯ ಭವನಗಳು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಚಟುವಟಿಕೆಗಳಿಗೆ ವಿನಿಯೋಗಿಸಲು ಕ್ರಮವಹಿಸುವುದು.

ಇನ್ನುಳಿದಂತೆ ಓದಲಾದ(1)ರ ಸರ್ಕಾರದ ಆದೇಶ ಹಾಗು ಓದಲಾದ(2)ರ ಸರ್ಕಾರದ ಸುತ್ತೋಲೆಯಲ್ಲಿನ ಇತರೆ ಎಲ್ಲಾ ನಿಯಮ / ಷರತ್ತುಗಳು ಯೋಜನೆಯ ಐದನೇ ಹಂತದ ಅನುಷ್ಠಾನದಲ್ಲಿ ಅನ್ವಯವಾಗುತ್ತವೆ ಎಂದು ತಿಳಿಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)

ನಿರ್ದೇಶಕರು (ಸುವರ್ಣ ಗ್ರಾಮೋದಯ ಯೋಜನೆ)
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೇಂದ್ರ ಪುರಸ್ಕೃತ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ) ಎಂಬ ನೂತನ ಯೋಜನೆಯ ಅನುಷ್ಠಾನದ ಕುರಿತು.

**ಓದಲಾಗಿದೆ :**

1. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯ, ನವದೆಹಲಿ ರವರ ಪತ್ರ ಸಂಖ್ಯೆ: ಕೆ–11011/ 1/ 2013 –RGPSA (I), (II), (III) ದಿನಾಂಕ: 26–03–2013.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2012(ಪಿ3) ದಿನಾಂಕ: 28.03.2013.
3. ಸಚಿವ ಸಂಪುಟದ ನಡವಳಿ ದಿನಾಂಕ: 17.07.2013.

## ಪ್ರಸ್ತಾವನೆ:

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಹಾಲಿ ರಾಷ್ಟ್ರದಾದ್ಯಂತ ಅನುಷ್ಠಾನಗೊಳಿಸುತ್ತಿರುವ e-PANCHAYAT, ಪಂಚಾಯತ್ ಎಂಪವರ್‌ಮೆಂಟ್ ಅಂಡ್ ಅಕೌಂಟಬಿಲಿಟಿ ಇನ್ಸೆಂಟೀವ್ ಸ್ಕೀಮ್ (PEAIS), ಪಂಚಾಯತ್ ಮಹಿಳಾ ಏವಂ ಯುವಶಕ್ತಿ ಅಭಿಯಾನ (PMEYSA) ಹಾಗೂ ಬ್ಯಾಕ್‌ವರ್ಡ್ ರೀಜನ್ಸ್ ಗ್ರಾಂಟ್ ಫಂಡ್ (BRGF) ಯೋಜನೆಗಳಲ್ಲಿ ಅಳವಡಿಸಿಕೊಳ್ಳಲಾಗಿದ್ದ ಸಾಮರ್ಥ್ಯಾಭಿವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಸಮ್ಮಿಳನಗೊಳಿಸಿ, ಪಂಚಾಯತ್ ರಾಜ್ ಸಂಸ್ಥೆಗಳನ್ನು ಹಾಗೂ ಅದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಸಾಮರ್ಥ್ಯಾಭಿವೃದ್ಧಿಯನ್ನು ಬಲಪಡಿಸುವ ಉದ್ದೇಶದಿಂದ 2012–13ನೇ ಸಾಲಿನಿಂದ ನೂತನ ಯೋಜನೆಯನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿದೆ. ಸದರಿ ಯೋಜನೆಯನ್ನು "ರಾಜೀವ್‌ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನ" (RGPSA) ಎಂದು ಕರೆಯಲಾಗಿದೆ. ಈ ಯೋಜನೆಯನ್ನು 12ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.

ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ನೀಡಿದ್ದು ಅದನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಕೇಂದ್ರ ಪುರಸ್ಕೃತ "ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ) ಯೋಜನಾ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 75:25ರ ಪ್ರಮಾಣದಲ್ಲಿ ಭರಿಸಲಿವೆ.

ಈ ನೂತನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಕೆಳಕಂಡ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2012(ಪಿ3), ಬೆಂಗಳೂರು,**

**ದಿನಾಂಕ: 25-07-2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಶಕ್ತಗೊಳಿಸಲು 2012-13ನೇ ಸಾಲಿನಿಂದ ಕೇಂದ್ರ ಪುರಸ್ಕೃತ ಯೋಜನೆಯಾದ "ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ) ಎಂಬ ನೂತನ ಯೋಜನೆ"ಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಸದ್ರಿ ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2515-00-101-0-31(ಯೋಜನೆ) ಯಡಿ ಭರಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ ಪಿಡಿ 64 ಡಿಪಿಡಿ 2012 ದಿನಾಂಕ: 18.05.2013 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 232 ವೆಚ್ಚ-6/2013 ದಿನಾಂಕ01.06.2013ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರ್ಗರೇಟ್ ಲೀನಾ ನರೋನ್ಹ)
ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/69/ಉಖಾಯೋ/2013

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ : 24.07.2013

# ಸುತ್ತೋಲೆ

**ವಿಷಯ:** ವಿಷಯ:20 ಉದ್ಯೋಗ ಚೀಟಿದಾರರ ಗುಂಪಿನಿಂದ "ಕಾಯಕ ಸಂಘ" ಸಂಘಟನೆ–ಕಾಯಕ ಬಂಧು ಕಾರ್ಯ ನಿರ್ವಹಣೆ– ಕುರಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಡಿ ಕಾರ್ಯಚರಣೆ ಮಾರ್ಗಸೂಚಿಗಳನ್ವಯ ಕಾಯಕ ಬಂಧುಗಳ ಆಯ್ಕೆ ಮತ್ತು ಹಣ ಪಾವತಿ ಸಂಬಂಧದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 69 ಉಖಾಯೋ 2011 ದಿನಾಂಕ: 03–05–2012 ಹಾಗೂ 19–02–2013ರಲ್ಲಿ ಸೂಚನೆಗಳನ್ನು ಹೊರಡಿಸಲಾಗಿತ್ತು. ಪ್ರಸ್ತುತ ಭಾರತ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದಡಿ ಕಾರ್ಯಚರಣೆ ಮಾರ್ಗಸೂಚಿಗಳು 2013ರ (4ನೇ ಆವೃತ್ತಿ) ಹೊರಡಿಸಿದ್ದು ಅದರನ್ವಯ  ಕಾಯಕ ಸಂಘ, ಸಂಘಟನೆ ಹಾಗೂ ಕಾಯಕ ಬಂಧು ಆಯ್ಕೆ ಹಾಗೂ ಅವರ ಪ್ರಕಾರ್ಯಗಳ ನಿರ್ವಹಣೆಯನ್ನು ಪರಿಷ್ಕರಿಸಿ ಕಾರ್ಯವಿಧಾನಗಳನ್ನು ನಿಗಧಿಪಡಿಸಬೇಕಾಗಿದೆ. ಹಾಗಾಗಿ ಈ ಸಂಬಂಧದಲ್ಲಿ ಹಿಂದೆ ಹೊರಡಿಸಿದ್ದ ಸೂಚನೆಗಳನ್ನು ಸೂಕ್ತವಾಗಿ ಮಾರ್ಪಡಿಸುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ  ಈ ಹಿಂದೆ ಹೊರಡಿಸಿರುವ ಸುತ್ತೋಲೆಗಳನ್ನು ಮಾರ್ಪಡಿಸುತ್ತಾ ಈ ಕೆಳಕಂಡ ಪರಿಷ್ಕೃತ ಸೂಚನೆಗಳು/ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾದ ಅನುಪಾಲನೆಗಾಗಿ ಹೊರಡಿಸಿದೆ.

1. ಒಂದೇ ಗ್ರಾಮದ ನಿವಾಸಿಗಳಾಗಿರುವ ಹಾಗೂ ಸಿಂಧುವಾದ ನರೇಗಾ ಉದ್ಯೋಗ ಚೀಟಿಹೊಂದಿರುವ 20 – 25 ಜನರಿಂದ ಒಂದು ಕಾಯಕ ಸಂಘವನ್ನು ಸಂಘಟಿಸುವುದು.
2. ಈ 20 – 25 ಜನರು ಪುರುಷರಾಗಬಹುದು ಅಥವಾ ಮಹಿಳೆಯರಾಗಬಹುದು. ಹಾಗಾಗಿ ಕಾಯಕ ಸಂಘವು ಒಂದು ಸಮ್ಮಿಶ್ರಿತ ಗುಂಪಾಗಿರುತ್ತದೆ. ಉದ್ಯೋಗ ಚೀಟಿಯಲ್ಲಿ ಹೆಸರಿರುವ ವ್ಯಕ್ತಿಗಳು ತಮ್ಮ ಗ್ರಾಮದ ಯಾವುದೇ ಕಾಯಕ ಸಂಘದಲ್ಲಿ ಸದಸ್ಯರಾಗಬಹುದು.
3. ಇದರ ಉದ್ದೇಶವು 20 – 25 ಜನರ ಏಕರೂಪದ ಗುಂಪನ್ನು ಸಂಘಟಿಸುವುದಾಗಿದ್ದು ಇದರಿಂದ ಅವರು ಧ್ವನಿ ಎತ್ತಲು ಹಾಗೂ ಬಲಯುತ್ತರಾಗುವರು. ಈ ಸಂಘವು ಗ್ರಾಮ ಪಂಚಾಯಿತಿ/ಪಂಚಾಯತ್ ರಾಜ್ ಸಂಸ್ಥೆಗಳು/ ಸರ್ಕಾರದೊಂದಿಗೆ ಒಂದು ಘಟಕದಂತೆ  ಸ್ಪಂದಿಸಿ ಕಾರ್ಯನಿರ್ವಹಿಸುವುದು.

4. ಈ ಕಾಯಕ ಸಂಘವು ಒಮ್ಮೆ ಸಂಘಟನೆ ಆದನಂತರ 20 – 25 ಜನ ಸದಸ್ಯರು ಅವರಲ್ಲೇ ಒಬ್ಬ ನಾಯಕನನ್ನು ಆಯ್ಕೆ ಮಾಡಿಕೊಳ್ಳುವರು. ಆಯ್ಕೆಯಾದ ಕಾಯಕ ಸಂಘದ ಈ ಸದಸ್ಯನನ್ನು ಕಾಯಕ ಬಂಧು ಎಂದು ಕರೆಯತಕ್ಕದ್ದು. ವೈಯಕ್ತಿಕ ಫಲಾನುಭವಿಗಳ ಪ್ರಕರಣದಲ್ಲಿ ಅವರು ಇಚ್ಛಿಸಿದಲ್ಲಿ ಅವರೇ ಕಾಯಕ ಬಂಧು ಆಗಬಹುದು.

5. ಈ ಕಾಯಕ ಬಂಧುವು ಸಂಘದ ಪರವಾಗಿ ಗ್ರಾಮ ಪಂಚಾಯಿತಿ/ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಸತತವಾಗಿ ಸಮನ್ವಯತೆ ನಡೆಸುವರು. ಈ ಹೆಚ್ಚಿನ ಕೆಲಸಕ್ಕಾಗಿ ಅವರಿಗೆ ಹೆಚ್ಚಿನ ಮೊಬಲಗನ್ನು ಪಾವತಿಸಲಾಗುವುದು.

6. ಕಾಯಕ ಸಂಘವು ಒಂದು ಗುಂಪಾಗಿ ಪ್ರತಿವಾರವು ನಮೂನೆ–6 ನ್ನು ಸಲ್ಲಿಸತಕ್ಕದ್ದು (ನಮೂನೆ–6 ಕೆಲಸಕ್ಕಾಗಿ ಆಕುಶಲ ಕಾರ್ಮಿಕರು ಕೋರಿಕೆ ಸಲ್ಲಿಸುವ ನಮೂನೆಯಾಗಿರುತ್ತದೆ. ಕಾಯಕ ಬಂಧು ಈ ನಮೂನೆ–6ನ್ನು ಗ್ರಾಮ ಪಂಚಾಯಿತಿಗೆ/ಸಹಾಯವಾಣಿಗೆ ನೀಡತಕ್ಕದ್ದು. ಕೆಲಸದ ಬೇಡಿಕೆಯು ಶೂನ್ಯ ಇದ್ದರೂ ಸಹ ಕಾಯಕ ಬಂಧುವು ಶೂನ್ಯ–ನಮೂನೆ–6ರನ್ನು ತನ್ನ ಸಹಿಯೊಂದಿಗೆ ಸಲ್ಲಿಸತಕ್ಕದ್ದು.

7. ಎಲ್ಲರಿಗೂ ಅನ್ವಯಿಸುವ ಒಂದೇ ಕಾಮಗಾರಿಯ ಸ್ಥಳದಲ್ಲಿ ಕಾಯಕ ಸಂಘವು ಕಾಮಗಾರಿ ಪಡೆಯತಕ್ಕದು. ಕಾಯಕ ಬಂಧುವು ಕೆಲಸ ನಿರ್ವಹಿಸಿದನ್ವಯ ಅಕುಶಲ ಕೂಲಿ ಮಜೂರಿ ಪಡೆಯುವರು.

8. ಕಾಯಕ ಬಂಧುವು ಹೆಚ್ಚಿನ ಕೆಲಸವನ್ನು ನಿರ್ವಹಿಸುವುದರಿಂದ ಇವರು ಹೆಚ್ಚುವರಿ ಕೆಲಸದ ಬಾಬ್ತು ಹೆಚ್ಚುವರಿ ಸಂದಾಯ ಪಡೆಯುವರು. ಇದರ ಸಂಬಂಧದ ವಿವರಗಳನ್ನು ಈ ಕೆಳಗಿನಂತೆ ನೀಡಿದೆ.

9. ಕಾಯಕ ಸಂಘದ ಸಂಘಟನೆಯ ಪರಿಯೋಜನೆ ಮತ್ತು ಜವಾಬ್ದಾರಿಗಳು ಹೀಗಿವೆ:–

i) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿ ಮೊದಲಿಗೆ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರುಗಳು, ಪಂಚಾಯತ್ ರಾಜ್ ಇಂಜಿನಿರಿಂಗ್ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು ಮತ್ತು ಕ್ರೀಯಾಶೀಲ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು **ಯೋಜನಾ ಸಭೆ** ಕರೆಯುವುದು.

ii) ಸದರಿ ಯೋಜನಾ ಸಭೆಗೆ, ನರೇಗಾ ಉಸ್ತುವಾರಿ ಹೊಂದಿರುವ ಉಪಕಾರ್ಯದರ್ಶಿ/ಯೋಜನಾ ನಿರ್ದೇಶಕರು ಹಾಗೂ ಕ್ರೀಯಾಶೀಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸಹ ಕರೆಯತಕ್ಕದ್ದು,

iii) ಪ್ರತಿ ಹೋಬಳಿಗೆ ಒಬ್ಬರು ಜಿಲ್ಲಾ ಮಟ್ಟದ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು. ನೋಡಲ್ ಅಧಿಕಾರಿ, ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸೇರಿ ಪ್ರತಿ ಗ್ರಾಮ ಪಂಚಾಯತಿಗೆ **5 ರಿಂದ 6 ಜನ ನೌಕರರನ್ನು** ಗುರುತಿಸಿ ಅವರುಗಳಿಗೆ **ಗ್ರಾಮವಾರು** ಕಾಯಕ ಸಂಘ ಸಂಘಟಿಸುವ ಪ್ರಕಾರ್ಯವನ್ನು ವಹಿಸುವುದು.

iv) ಪ್ರತಿ ಗ್ರಾಮ ಪಂಚಾಯತಿಗೆ ಒಬ್ಬರು ತಾಲ್ಲೂಕು ಮಟ್ಟದ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು.

v) **ಇಲಾಖಾ ವತಿಯಿಂದ ಯಾವುದೇ ಹಣ ಅಥವಾ ಪ್ರೋತ್ಸಾಹ ಧನವಿಲ್ಲದೇ** ಸರ್ಕಾರೇತರ ಸಂಸ್ಥೆಗಳು, ಹಕ್ಕೊತ್ತಾಯದ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ಕಾಯಕ ಸಂಘಗಳನ್ನು ಸಂಘಟಿಸಲು ಸ್ವತಂತ್ರವಾಗಿವಾಗಿವೆ. ಅಂತಹ ಸಂಸ್ಥೆಗಳನ್ನು ಪ್ರತ್ಯೇಕವಾದ ಸಭೆಗೆ ಪ್ರತ್ಯೇಕವಾಗಿ ಕರೆಯತಕ್ಕದ್ದು ಮತ್ತು ಈ ಪತ್ರದ ಪ್ರತಿಯನ್ನು ಅವರುಗಳಿಗೆ ನೀಡುವುದು.

vi) **ಗ್ರಾಮ ಮಟ್ಟದಲ್ಲಿ** ಕಾಯಕ ಸಂಘವನ್ನು ಸಂಘಟಿಸುವುದಕ್ಕಾಗಿ ಈ ಕೆಳಕಂಡ ವರ್ಗದ ನೌಕರರನ್ನು ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.

ಅ) ಗ್ರಾಮ ಪಂಚಾಯಿತಿಯ ಕರ ವಸೂಲಿಗಾರರು

ಆ) ಗ್ರಾಮ ಪಂಚಾಯಿತಿಯ ನೀರುಗಂಟಿಗಳು

ಇ) ವಯಸ್ಕರ ಶಿಕ್ಷಣ ಬೋಧಕರು

ಈ) ಅಂಗನವಾಡಿ ಶಿಕ್ಷಕರು/ಸಹಾಯಕರು

ಉ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಳಗೆ

ಊ) ಗ್ರಾಮ ಪಂಚಾಯಿತಿಯ ಗಣಕ ಯಂತ್ರ ನಿರ್ವಾಹಕರು

ಎ) ಆಶಾ ಕಾರ್ಯಕರ್ತರು/ಕಾರ್ಯಕರ್ತೆಯರು ಮತ್ತು ಮುಂತಾದವರು

vii) ಈ ರೀತಿ ಪ್ರತಿ ತಾಲ್ಲೂಕಿನ ನೋಡಲ್ ಅಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯು ತಮ್ಮ ತಾಲ್ಲೂಕು ನೌಕರರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ **5 ಜನ ನೌಕರರನ್ನು ಅವರ ಹೆಸರು/ಪದನಾಮದೊಂದಿಗೆ ಗುರುತಿಸುವುದು**. ಸದರಿಯವರು **ಪ್ರತಿಯೊಂದು ಗ್ರಾಮಕ್ಕೂ ಭೇಟಿ** ನೀಡಿ ಆ ಗ್ರಾಮದಲ್ಲಿ ಕಾಯಕ ಸಂಘವನ್ನು ಸಂಘಟಿಸತಕ್ಕದು. **ಈ ಪಟ್ಟಿಯನ್ನು** ಸಿದ್ಧಗೊಳಿಸಿ **ದಿನಾಂಕ: 30.07.2013ರೊಳಗೆ ಆದೇಶ ಹೊರಡಿಸುವುದನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಉಪಕಾರ್ಯದರ್ಶಿಯವರು ಪರಿಶೀಲಿಸಿ ಖಾತರಿ ಪಡಿಸಕೊಳ್ಳತಕ್ಕದ್ದು.**

viii) ಆರೀತಿ ಗುರುತಿಸಲ್ಪಟ್ಟ 5 ಮಂದಿ ನೌಕರರು ಈ ಕೆಳಕಂಡ ಪೂರ್ವಸಿದ್ದತೆಗಳೊಂದಿಗೆ ಅವರಿಗೆ ವಹಿಸಿರುವ ಗ್ರಾಮಕ್ಕೆ ಭೇಟಿ ನೀಡುವುದು.

(ಅ) ಕಾಯಕ ಸಂಘ ಸಂಘಟನೆಗಾಗಿ ಪೂರ್ವಮುದ್ರಿತ ನಮೂನೆಗಳು ಹಾಗೂ

(ಆ) ಗ್ರಾಮದಲ್ಲಿನ ಉದ್ಯೋಗ ಚೀಟಿ ಹೊಂದಿರುವವರ ಪಟ್ಟಿ

ix) ಗ್ರಾಮವನ್ನು ತಲುಪಿದ ನಂತರ ಕಾರ್ಯ ವಹಿಸಿಕೊಂಡಿರುವ ನೌಕರರು ಸಭೆಯನ್ನು ಕರೆದು

ಕಾಯಕ ಸಂಘದ ಪರಿಕಲ್ಪನೆಯನ್ನು ವಿವರಿಸುವುದು ಹಾಗೂ ಕಾಯಕ ಸಂಘ ಸಂಘಟನೆಯ ಮುದ್ರಿತ ನಮೂನೆಗಳನ್ನು ಹಂಚುವುದು. ಅವರು ಉದ್ಯೋಗ ಚೀಟಿ ಹೊಂದಿದವರಿಗೆ ನಮೂನೆಯನ್ನು ಹೇಗೆ ತುಂಬಬೇಕೆಂದು ವಿವರಿಸತಕ್ಕದ್ದು.

x) ಗ್ರಾಮ ನೋಡಲ್ ನೌಕರನು (ಮೇಲಿನಂತೆ ಕಾರ್ಯವರ್ಹಿಸಿರುವ ನೌಕರ) ಕಾಯಕ ಸಂಘ ಸಂಘಟನೆಯ ನಮೂನೆಗಳನ್ನು ಹೇಗೆ ತುಂಬುವುದು ಎಂಬ ಬಗ್ಗೆ ಸವಿವರವಾಗಿ ವಿವರಿಸುವುದು. ತದನಂತರ ಉದ್ಯೋಗ ಚೀಟಿಹೊಂದಿರುವವರು ಅವರ ಬಿಡುವಿನ ಸಮಯದಲ್ಲಿ ತುಂಬಲು ಅನುವಾಗುವಂತೆ ಸದರಿ ಮುದ್ರಿತ ನಮೂನೆಗಳನ್ನು ಅವರಲ್ಲಿಯೇ ಬಿಡುವುದು. ಗ್ರಾಮದ **ನೋಡಲ್ ನೌಕರರು ಮತ್ತೋಮ್ಮೆ 3 ದಿನಗಳ ನಂತರ ಆ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದವರಿಂದ ತುಂಬಿಸಲ್ಪಟ್ಟಿರುವ ಕಾಯಕ ಸಂಘ ಸಂಘಟನೆಯ ನಮೂನೆಗಳನ್ನು ಹಿಂದೆ ಪಡೆದು ಸಂಗ್ರಹಿಸಿಟ್ಟುಕೊಳ್ಳುವುದು.**

xi) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ ಉಪಕಾರ್ಯದರ್ಶಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಗ್ರಾಮ ನೋಡಲ್ ನೌಕರರಿಗೆ (ಪ್ಯಾರ(V)ನ್ನು ನೋಡುವುದು) ಪೂರ್ಣ ಪ್ರಮಾಣದ ತರಬೇತಿಯನ್ನು ಜುಲೈ ತಿಂಗಳ **ದಿನಾಂಕ: 29/30ರಂದು** ಏರ್ಪಡಿಸುವುದು.

xii) ಗ್ರಾಮ ಭೇಟಿ ಮತ್ತು ಗುಂಪು ಸಂಘಟನೆ ಸಂಬಂಧದಲ್ಲಿ **ದಿನಾಂಕ: 01.08.2013** ರಿಂದ **14.08.2013ರ** ಕಾಲಾವಧಿಗೆ ಗ್ರಾಮವಾರು ಮತ್ತು ಗ್ರಾಮ ನೋಡಲ್ ನೌಕರರವಾರು **ಗ್ರಾಮ ಕಾರ್ಯಕ್ರಮ ವೇಳಾಪಟ್ಟಿಯನ್ನು ತಯಾರಿಸಿ ಹೊರಡಿಸತಕ್ಕದ್ದು**. ಎಲ್ಲಾ ಗ್ರಾಮಗಳನ್ನು ಈ ಕಾರ್ಯಕ್ರಮದಡಿ ಒಳಪಡಿಸತಕ್ಕದು. **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಬರವಣಿಗೆ ಮೂಲಕ ಆದೇಶಗಳನ್ನು ಹೊರಡಿಸತಕ್ಕದ್ದು.**

ಜಿಲ್ಲೆ ------------ ತಾಲ್ಲೂಕು ------------------

| ಕ್ರಮ ಸಂಖ್ಯೆ | ಗ್ರಾಮ | ಗ್ರಾಮ ಪಂಚಾಯತಿ | ಗ್ರಾಮ ನೋಡಲ್ ನೌಕರರ ಹೆಸರು ಮತ್ತು ಪದನಾಮ | ಕಾಯಕ ಸಂಘ ಸಂಘಟನೆಗೆ ಮೊದಲ ಬಾರಿಗೆ ಗ್ರಾಮ ಭೇಟಿಯ ದಿನಾಂಕ: | ತುಂಬಿದ ಕಾಯಕ ಸಂಘ ನಮೂನೆಗಳನ್ನು ಸಂಗ್ರಹಿಸಲು ಎರಡನೇ ಬಾರಿಗೆ ಗ್ರಾಮ ಭೇಟಿಯ ದಿನಾಂಕ: | ತಾಲ್ಲೂಕು/ಜಿಲ್ಲಾ ನೋಡಲ್ ಅಧಿಕಾರಿಯ ಹೆಸರು ಮತ್ತು ಪದನಾಮ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |
| | | | | | | |

**ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ** **ಕಾರ್ಯನಿರ್ವಾಹಕನ ಸಹಿ**

**ಮೇಲುರುಜು**

xiii) ಗ್ರಾಮ ಪಂಚಾಯತಿಯ ನೋಡಲ್ ಅಧಿಕಾರಿಯನ್ನು ಗ್ರಾಮದ ನೋಡಲ್ ನೌಕರನು ಗ್ರಾಮಕ್ಕೆ ಭೇಟಿ ಕೊಟ್ಟಿರುವ ಕುರಿತು ಪರಿವೀಕ್ಷಣೆ ಮಾಡುವುದು ಮತ್ತು ಕಾಯಕ ಸಂಘ ಸಂಘಟಿಸಿದುದರ ನಮೂನೆಯ ಒಂದು ಪ್ರತಿಯನ್ನು ಸಂಗ್ರಹಿಸಿಕೊಳ್ಳುವುದು. ಕಾಯಕ ಸಂಘ ಸಂಘಟಿಸಿದುದರ ಒಂದು ಪ್ರತಿಯನ್ನು ಗ್ರಾಮ ಪಂಚಾಯತಿಗೆ ಕಳುಹಿಸುವುದು ಮತ್ತು ತಂತ್ರಾಂಶದಲ್ಲಿ ದತ್ತಾಂಶ ಮಾಹಿತಿಯನ್ನು ನಮೂದಿಸುವುದು. (ಈ ಸಂಬಂಧದ ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು).

xiv) ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಕಾಯಕ ಸಂಘ ಸಂಘಟನೆಯ ನಮೂನೆಯನ್ನು ಮುಂಚಿತವಾಗಿ ಮುದ್ರಿಸಿಕೊಂಡು ಅದನ್ನು ಲಭ್ಯ ಮಾಡತಕ್ಕದ್ದು. ಉಪಕಾರ್ಯದರ್ಶಿ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು **ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಪ್ರತಿ ತಾಲ್ಲೂಕಿಗೆ 3000ದಂತೆ ಹಳದಿ ಬಣ್ಣದ ನಮೂನೆಗಳನ್ನು ಮುದ್ರಿಸತಕ್ಕದ್ದು.**

## ಕಾಯಕ ಸಂಘ ಸಂಘಟನೆ ನಮೂನೆ:

## 100 ದಿನಗಳ ಕೂಲಿ ಖಾತರಿ ಯೋಜನೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ.

ಜಿಲ್ಲೆ-------------------------- ತಾಲ್ಲೂಕು---------------------

ಗ್ರಾಮ ಪಂಚಾಯತಿ------------------- ಗ್ರಾಮ---------------------

(ಎಲ್ಲಾ ಸದಸ್ಯರು ಉದ್ಯೋಗ ಚೀಟಿ ಹೊಂದಿದವರಾಗಿದ್ದು ಅದೇ ಗ್ರಾಮದವರಾಗಿರತಕ್ಕದು)

ಕಾಯಕ ಸಂಘದ ಹೆಸರು (ಕಾ.ಸಂ)________________________________

ಕಾಯಕ ಬಂಧು ಹೆಸರು (ಕಾ.ಬಂ)________________________________

ಕಾಯಕ ಬಂಧು ಉದ್ಯೋಗ ಚೀಟಿ ಸಂಖ್ಯೆ ____________________________

| ಕ್ರಮ ಸಂಖ್ಯೆ | ಸದಸ್ಯನ ಹೆಸರು | ಉದ್ಯೋಗ ಚೀಟಿ ಸಂಖ್ಯೆ | ಉದ್ಯೋಗ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥನ ಹೆಸರು | ಸದಸ್ಯನ ವಿವರಗಳು( ಕಲಂ. 2ರಂತೆ) | | | | | ಸದಸ್ಯ ಸಹಿ ಅಥವಾ ಎಡ ಹೆಬ್ಬೆಟ ಗುರುತ |
|---|---|---|---|---|---|---|---|---|---|
| | | | | ಲಿಂಗ (ಗಂಡು/ಹೆಣ್ಣು) | ವಯಸ್ಸು | ಜಾತಿ | ಪಡಿತರ ಚೀಟಿ ಸಂಖ್ಯೆ | ಆಧಾರ್ ನಂ. (ಐಚ್ಛಿಕ) | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |

ನಾನು ಕಾಯಕ ಬಂಧು ಆಗಿ ಮತ್ತು ಹೆಚ್ಚುವರಿ ಸಂದಾಯದ ಮೇರೆಗೆ ಅಧಿಕಾವಧಿಗೆ ಕೆಲಸ ನಿರ್ವಹಿಸಲು ಒಪ್ಪಿರುತ್ತೇನೆ.

**ಗ್ರಾಮ ನೋಡಲ್ ನೌಕರನ ಸಹಿ** **ಕಾಯಕ ಬಂಧುವಿನ ಎಡ ಹೆಬ್ಬೆಟ್ಟು ಗುರುತು/ಸಹಿ**

10. ಕಾಯಕ ಬಂಧು ಅವನ/ಅವಳ ಕಾಯಕ ಸಂಘದ ಜೊತೆಯಲ್ಲಿ ಕಾಮಗಾರಿ ಸ್ಥಳದಲ್ಲಿ ನಿಯಮಿತ ವೇಳೆಯಲ್ಲಿ ಅಕುಶಲ ಕೂಲಿಕಾರನಾಗಿ ಕಾರ್ಯನಿರ್ವಹಿಸತಕ್ಕದು. ಕೆಳಗಿನ ಕಂಡಿಕೆ 11ರಲ್ಲಿ ತೋರಿಸಿರುವ ಹೆಚ್ಚುವರಿ ಕೆಲಸಗಳನ್ನು ನಿಯಮಿತ ಅವಧಿ ಮೀರಿದ ಸಮಯದಲ್ಲಿ ನಿರ್ವಹಿಸತಕ್ಕದು.

11. ಕಾಯಕ ಬಂಧುವಿಗೆ ಸಂದಾಯ ಮಾಡುವ ಕ್ರಮವಿಧಾನಗಳು:–

ಕಾಯಕ ಬಂಧು ಈ ಕೆಳಗೆ ತಿಳಿಸಿರುವ ವಿಷಯಗಳನ್ವಯ ನಿಯಮಿತ ಅವಧಿಗೆ ಮೀರಿ ಕೆಲಸ ನಿರ್ವಹಿಸಲು ಒಪ್ಪತಕ್ಕದು.

i) ಹಾಜರಾತಿ ಪಟ್ಟಿಗಳ ನಿರ್ವಹಣೆ.

ii) ವಾರದ ಬೇಡಿಕೆಯ ಮಾಹಿತಿಯನ್ನು ಸಂಗ್ರಹಿಸಿ ಗ್ರಾಮ ಪಂಚಾಯತಿಗೆ ಸಲ್ಲಿಸುವುದು.

iii) ಕಾಮಗಾರಿಯ ಸ್ಥಳದಲ್ಲಿ ಸಮನ್ವಯತೆ ಏರ್ಪಡಿಸುವುದು.

iv) ಗ್ರಾಮ ಪಂಚಾಯತಿ/ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ವಾರದ ಪರಿಶೀಲನಾ ಸಭೆ/ಇತರೆ ಸಭೆಗಳಿಗೆ ಹಾಜರಾಗುವುದು.

v) ಕೂಲಿ ಕಾರ್ಮಿಕರಿಗೆ ನೆರವು ನೀಡುವುದು.

## ಆ ಪ್ರಯುಕ್ತ ಕಾಯಕ ಬಂಧುವಿನ ಸಂದಾಯಗಳು ಈ ಕೆಳಕಂಡಂತೆ ಇರತಕ್ಕದು:–

1. ಮ.ಗಾ.ರಾ.ಗ್ರಾ.ಉ.ಖಾ.ಯೋಜನೆಯ ಮಾರ್ಗಸೂಚಿಗಳ ಪ್ರಕಾರ ನಿಗಧಿತವಾದ ಕೆಲಸಗಳಿಗೆ ಅಕುಶಲ ಕೂಲಿ ಹಣ: ಇದರೊಂದಿಗೆ

2. ಕಾಯಕ ಸಂಘದ ಸದಸ್ಯರುಗಳಿಂದ ಸೃಜನೆಯಾದ ಪ್ರತಿ ಮಾನವ ದಿನಕ್ಕೆ ರೂ3/–ಗಳಂತೆ. (ಈ ಸಂದಾಯವು ಮೇಲೆ ವಿವರಿಸಿದಂತೆ ನಿಯಮಿತ ಅವಧಿಗೆ ಮೀರಿ ಕೆಲಸ ನಿರ್ವಹಿಸಿರುವುದಕ್ಕಾಗಿದ್ದು ಇದನ್ನು ಅರೆಕುಶಲ ಕೆಲಸವೆಂದು ಪರಿಗಣಿಸಿ ಸಾಮಾಗ್ರಿ ಘಟಕದಡಿ ಭರಿಸುವುದು.

3. ಮೇಲಿನ ಎರಡು ಘಟಕಗಳ ಒಟ್ಟು ಮೊಬಲಗನ್ನು ವಾರದಲ್ಲಿ ಕಾಯಕ ಬಂಧುವಿಗೆ ಪಾವತಿಸುವುದು.

ಈ ಸುತ್ತೋಲೆಯ ಸುಗಮ ಅನುಷ್ಠಾನಕ್ಕೆ ಮುಂದೆ ಅಗತ್ಯವಾದ ಸೂಚನೆಗಳನ್ನು ಅನುಸರಣೆಗಾಗಿ ಕಾಲಕಾಲಕ್ಕೆ ಹೊರಡಿಸಲಾಗುವುದು.

(ಮುನೀಶ್ ಮೌದ್ಗಿಲ್)
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# 2ªªÆU f¯AiÄ° ¸Äªtð UÁªÆÃzAiÄ



CAU£ªÁr PÉÆqz° ªÄP¼Ä



CAU£ªÁr PÃAz



º½AiÄ° g¸ ¤ªiÁðt



UÁªÄz° ZgAr ¤ªiÁðt

# KARNATAKA VIKAS : September 2013

A Monthly Magazine for Rural Development and Panchayat Raj Department, Government of Karnataka
Regd No. KA/ BGGPO/2531/2012-14, Licence to Post "without Prepayment" WPP-32
RNI No. : 28103/1974 Total No. of Pages 52, Posted at Bangalore GPO on 9th, 10th, 11th of Every Month


## «««z f¯U¼° ¸Äªtð UÁªÆÃzAiÄ



ºÁ¸£-g¸ ªÄvÄ ZgÀr



aPÌ§¼ÁîÄg- UÁ«ÄÃt g¸



aPÌ§¼ÁîÄg- ¸ªÄÄzÁAiÄ ¨ªÀ£



avÀzÄUð- CAUÀ£ªÁr PÃAz


Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambekar Veedhi,
Bangalore - 560 001.

Printed by
The Director,
**Government Press**
Bangalore, Karnataka.

Price : Rs. 5.00
¨ÉÉ gÀ. 5.00